ಸಂಪುಟ 01 | ಸಂಚಿಕೆ 129 | ಶುಕ್ರವಾರ 27 ಮಾರ್ಚ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ರಂಗಭೂಮಿ ದಿನ**

1962 ರಿಂದ ವಿಶ್ವದಾದ್ಯಂತ ವಾರ್ಷಿಕವಾಗಿ ಮಾರ್ಚ್ 27 ರಂದು ವಿಶ್ವ ರಂಗಭೂಮಿ ದಿನವನ್ನು ಆಚರಿಸಲಾಗುತ್ತದೆ, ಇದು "ರಂಗಭೂಮಿ" ಎಂಬ ಕಲಾ ಪ್ರಕಾರದ ಮಹತ್ವವನ್ನು ಹೆಚ್ಚಿಸಲು ಮತ್ತು ಸರ್ಕಾರಗಳು, ರಾಜಕಾರಣಿಗಳು ಮತ್ತು ಸಂಸ್ಥೆಗಳಿಗೆ ಎಚ್ಚರಿಕೆಯ ಕರೆಯಾಗಿ ಕಾರ್ಯನಿರ್ವಹಿಸುತ್ತದೆ, ಇದು ಜನರಿಗೆ ಅದರ ಮೌಲ್ಯವನ್ನು ಇನ್ನೂ ಗುರುತಿಸಿಲ್ಲ ಮತ್ತು ಆರ್ಥಿಕ ಬೆಳವಣಿಗೆಗೆ ಅದರ ಸಾಮರ್ಥ್ಯವನ್ನು ಅರಿತುಕೊಳ್ಳುವುದಿಲ್ಲ.

**2) ರಾಮ ನವಮಿ**

ರಾಮ ನವಮಿಯು ಭಕ್ತಿ ಮತ್ತು ಉತ್ಸಾಹದಿಂದ ಆಚರಿಸಲಾಗುವ ಮಂಗಳಕರ ಹಿಂದೂ ಹಬ್ಬಗಳಲ್ಲಿ ಒಂದಾಗಿದೆ. ಶ್ರೀ ರಾಮ ಜನ್ಮೋತ್ಸವ ಎಂದೂ ಕರೆಯಲ್ಪಡುವ ಇದು ವಿಷ್ಣುವಿನ ಏಳನೇ ಅವತಾರವಾದ ಭಗವಾನ್ ರಾಮನ ಜನ್ಮ ವಾರ್ಷಿಕೋತ್ಸವವನ್ನು ಸ್ಮರಿಸುತ್ತದೆ.

## ಸುಭಾಷಿತ

ಎಲ್ಲರನ್ನೂ ಪ್ರೀತಿಸು, ಕೆಲವರನ್ನಷ್ಟೇ ನಂಬು, ಯಾರಿಗೂ ಕೇಡು ಬಗೆಯಬೇಡ. ಇದುವೇ ಜೀವನದ ನಿಜ ಸೂತ್ರ

–ವಿಲಿಯಂ ಶೇಕ್ಸ್‌ಪಿಯರ್

ನೈಜ್ಯ ದೆಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪ್ರೇಕ್ಷಕರ ಭದ್ರತೆಗೆ ಪೊಲೀಸರ ಬಿಗಿ ಕ್ರಮ :ಅಣಕು ಪ್ರದರ್ಶನ

**ಬೆಂಗಳೂರು: ಮತ್ತೆ ಕಾಲ್ತುಳಿತದಂತಹ ಪರಿಸ್ಥಿತಿ ಉದ್ಭವಿಸಿದರೆ ಏನು ಮಾಡಬೇಕು..? ಜನರ ರಕ್ಷಣೆ ಹೇಗೆ ಮಾಡಬೇಕು ಎಂಬ ಬಗ್ಗೆ ಇಂದು ನಗರದ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಅಣಕು ಪ್ರದರ್ಶನ ನಡೆಸಲಾಯಿತು. ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ನಗರ ಪೊಲೀಸ್ ಆಯುಕ್ತ ಸೀಮಂತ್ಕುಮಾರ್ ಸಿಂಗ್, ಕೆಎಸ್ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಸಮುಖದಲ್ಲಿ ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ನೇತೃತ್ವದ ಡಿಫೆನ್?ಸ, ಫೈರ್ ಹಾಗೂ ಭದ್ರತಾ ಪೊಲೀಸರು ಸೇರಿದಂತೆ 500 ಕ್ಕೂ ಹೆಚ್ಚು ಮಂದಿ ಅಣಕು ಪ್ರದರ್ಶನ ನಡೆಸಿಕೊಟ್ಟರು.**



ಮಾಕ್ ಡ್ರಿಲ್ ಹಿನ್ನೆಲೆಯಲ್ಲಿ ಸ್ಟೇಡಿಯಂ ಸುತ್ತಮುತ್ತ ಹೈ ಅಲರ್ಟ್ ಘೋಷಣೆ ಮಾಡಲಾಗಿತ್ತು. ಸ್ಥಳದಲ್ಲಿ ಆ?ಯಂಬುಲೆನ್?ಸ, ಫೈರ್ ಎಂಜಿನ್ ವಾಹನಗಳನ್ನು ನಿಲ್ಲಿಸಲಾಗಿತ್ತು. ಮೈದಾನದ ಒಳಗೆ ಹಾಗೂ ಹೊರಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಮೈದಾನದ ಪ್ರವೇಶದ್ವಾರಗಳಲ್ಲಿ ಜನಸಂದಣಿ ಹೆಚ್ಚಾದರೆ ಅದನ್ನು ಯಾವ ರೀತಿ ನಿಭಾಯಿಸಬೇಕು. ಕಾಲ್ತುಳಿತದಂತಹ ಪ್ರಕರಣಗಳು ಮರುಕಳಿಸದಂತೆ ಹೇಗೆ ಎಚ್ಚರವಹಿಸಬೇಕು ಎನ್ನುವ ಬಗ್ಗೆಯೂ ಅಣುಕು ಪ್ರದರ್ಶನ ನಡೆಸಲಾಯಿತು.

ಸಲಹೆ–ಸೂಚನೆಗಳು: ಕಳೆದ ಐಪಿಎಲ್ ವಿಜಯೋತ್ಸವದ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ 11 ಮಂದಿ ಬಲಿಯಾದ ನಂತರ ಇದುವರೆಗೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಯಾವುದೇ ಪಂದ್ಯಗಳನ್ನು ಆಡಲು ಅವಕಾಶ ನೀಡಿರಲಿಲ್ಲ. ಆದರೆ, ಇದೀಗ ಈ ಬಾರಿಯ ಐಪಿಎಲ್ ಪಂದ್ಯಗಳನ್ನು ಆಡಿಸಲು ತೀರ್ಮಾನಿಸಿರುವುದರಿಂದ ಭಾರಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಾ.28 ರಂದು ನಡೆಯಲಿರುವ ಆರ್ಸಿಬಿ–ಸನ್ರೈಸರ್ಸ ತಂಡಗಳ ನಡುವಿನ ಉದ್ಘಾಟನಾ ಪಂದ್ಯ ವೀಕ್ಷಿಸಲು ಆಗಮಿಸುವ ಪ್ರೇಕ್ಷಕರು ಈ ಬಾರಿ ಹೊಸ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು ಅನಿವಾರ್ಯವಾಗಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಎಲ್ಲಾ ಪಂದ್ಯಗಳ ಟಿಕೆಟ್ಗಳನ್ನು ಆನ್ಲೈನ್ನಲ್ಲಿ ಮಾತ್ರ ಮಾರಾಟ ಮಾಡಲಾಗುತ್ತಿದೆ. ಟಿಕೆಟ್ಗಳ ಮೇಲೆ ಕ್ಯೂ ಆರ್ ಕೋಡ್ ಇರಲಿದೆ. ಪ್ರೇಕ್ಷಕರು ಪಂದ್ಯ ಆರಂಭವಾಗುವ ನಾಲ್ಕು ತಾಸು ಮೊದಲು ಹಾಜರಿರಬೇಕು. ಕ್ಯೂಆರ್ ಪರಿಶೀಲನೆಯ ನಂತರ ಹೋಲ್ಡಿಂಗ್ ಪ್ರದೇಶ ಪ್ರವೇಶಿಸಬೇಕು. ತಮ ಸ್ಟ್ಯಾಂಡ್ಗಳಿಗೆ ನಿರ್ದಿಷ್ಟ ಮಾರ್ಗದಲ್ಲಿ ಮಾತ್ರ ಸಂಚರಿಸಬೇಕು. ಯಾವುದೇ ಖಾಸಗಿ ವಾಹನ ತರಬಾರದು, ಟಿಕೆಟ್ ಇಲ್ಲದವರು ವಿನಾಕಾರಣ ಮೈದಾನದ ಹೊರ ಭಾಗದಲ್ಲಿ ಓಡಾಡಬಾರದು. ನಿಗದಿತ ಸ್ಥಳದಲ್ಲೇ ವಾಹನಗಳನ್ನು ಪಾರ್ಕ್ ಮಾಡಬೇಕು ಎಂದು ಸಲಹೆ ನೀಡಲಾಗಿದೆ.

2 ಸಾವಿರ ಪೊಲೀಸರ ನಿಯೋಜನೆ

ಬೆಂಗಳೂರು, ಮಾ.26– ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾ.28 ರಂದು ನಡೆಯಲಿರುವ ಆರ್ಸಿಬಿ ಮತ್ತು ಸನ್ರೈಸರ್ಸ ನಡುವಿನ ಪಂದ್ಯಾವಳಿಯ ಬಂದೋಬಸ್ತ್ಗಾಗಿ ಅಧಿಕಾರಿಗಳು ಸೇರಿದಂತೆ ಎರಡು ಸಾವಿರ ಪೊಲೀಸರನ್ನು ನಿಯೋಜನೆ ಮಾಡಿದ್ದೇವೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ಕುಮಾರ್ ಸಿಂಗ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭದ್ರತೆಗಾಗಿ 6 ಮಂದಿ ಡಿಸಿಪಿಗಳು, 15ಕ್ಕೂ ಹೆಚ್ಚು ಎಸಿಪಿಗಳು, ಎಚ್ಸಿ, ಪಿಸಿ ಮತ್ತು ಹೋಮ್ಗಾರ್ಡ್ಗಳನ್ನು ನಿಯೋಜಿಸಲಾಗಿದೆ. ಒಂದು ವೇಳೆ ಯಾರಾದರೂ ನಿಯಮ ಉಲ್ಲಂಘಿಘಿಸಿದರೆ, ಅಂತಹವರ ಪ್ರವೇಶ ನಿರಾಕರಿಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ. ಟಿಕೆಟ್ ಇದ್ದವರು ಮಾತ್ರ ಮೈದಾನಕ್ಕೆ ಬರಬೇಕು. ಈಗಾಗಲೇ ಎಲ್ಲ ರೀತಿಯ ಸೂಚನೆ ನೀಡಿದ್ದೇವೆ. ಇದರ ಜೊತೆಗೆ ನಾವು ಎಲ್ಲ ರೀತಿಯ ಅಗತ್ಯ ಕ್ರಮ

4ನೇ ಪುಟಕ್ಕೆ

# ಬಿಳಿಗಿರಿರಂಗನಾಥಸ್ವಾಮಿ ಹುಂಡಿಯಲ್ಲಿ 9.86 ಲಕ್ಷ ರೂ. ಸಂಗ್ರಹ



**ನೈಜ್ಯ ದೆಸೆ ನ್ಯೂಸ್**

**ಯಳಂದೂರು: ತಾಲೂಕಿನ ಪ್ರಸಿದ್ಧ ಧಾರ್ಮಿಕ ಪುಣ್ಯ ಕ್ಷೇತ್ರವಾಗಿರುವ ಬಿಳಿಗಿರಿರಂಗನಬೆಟ್ಟದ ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇಗುಲದಲ್ಲಿ ಬುಧವಾರ ಹುಂಡಿ ಹಣವನ್ನು ಎಣಿಕೆ ಮಾಡಲಾಗಿದ್ದು ಒಟ್ಟು 9.86,386 ಲಕ್ಷ ರೂ. ಸಂಗ್ರಹವಾಗಿದೆ.**

ನೋಟುಗಳ ರೂಪದಲ್ಲಿ 9,25,126 ರೂ. ಸಂಗ್ರಹವಾದರೆ ನಾಣ್ಯಗಳ ರೂಪದಲ್ಲಿ 61,260 ರೂ.ಗಳು ಸಂಗ್ರಹವಾಗಿದೆ. ಇದರೊಂದಿಗೆ ಒಂದು ಚಿನ್ನದ ಕಾಸು, ಒಂದು ಮಾಂಗಲ್ಯದ ಬೊಟ್ಟು ಹಾಗೂ ಒಂದು ಜೊತೆ ಬೆಳ್ಳಿಯ ಹರಕೆ ಕಣ್ಣುಗಳು ಹುಂಡಿಯಲ್ಲಿ ಸಂಗ್ರಹವಾಗಿವೆ ಎಂದು ದೇಗುಲದ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಮಾಹಿತಿ ನೀಡಿದ್ದಾರೆ. ಬೆಳಿಗ್ಗೆಯಿಂದಲೇ ಹುಂಡಿ ಹಣವನ್ನು ದೇಗುಲದ ಕಂದಾಯ ಇಲಾಖೆ, ದೇಗುಲದ ಸಿಬ್ಬಂಧಿ ಹಾಗೂ ಕರ್ನಾಟಕ ಗ್ರಾಮೀಣ ಬ್ಯಾಂಕಿನ ಸಿಬ್ಬಂಧಿ ಎಣಿಕೆ ಕಾರ್ಯದಲ್ಲಿ ಭಾಗವಹಿಸಿದ್ದರು.

ಫೆ.09 ರಂದು ರಂದು ಹಣವನ್ನು ಎಣಿಕೆ ಮಾಡಲಾಗಿತ್ತು. ಇದಾದ ಬಳಿಕ ಬುಧವಾರ ಸಂಜೆವರೆಗೂ ಹುಂಡಿಂಯ ಹಣ ಎಣಿಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಬಿಳಿಗಿರಿರಂಗನಾಥ–'ಸ್ವಾಮಿ ದೇಗುಲ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ. ಶ್ರೀನಿವಾಸ್, ಸದಸ್ಯರಾದ ಸಿದ್ದರಾಜು, ವೆಂಕಟರಾಮು, ನಾರಾಯಣಸ್ವಾಮಿ, ಕೇತಮ್ಮ, ಸುರೇಶ್, ಪಾರುಪತ್ತೇದಾರ ರಾಜು ರಜಸ್ವ ನಿರೀಕ್ಷಕ ಯದುಗಿರಿ, ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ವ್ಯವಸ್ಥಾಪಕ ವೀರಭದ್ರಸ್ವಾಮಿ, ಶೇಷಾದ್ರಿ, ಅರ್ಚಕರಾದ ರವಿಕುಮಾರ್, ಶ್ರೀನಿವಾಸ್ ಸೇರಿದಂತೆ ಅನೇಕರು ಇದ್ದರು.

# ಪೂಜ್ಯ ನಾವದಗಿ ಶ್ರೀಗಳಿಗೆ ಗೌರವ ಸಮರ್ಪಣೆ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ತಾಲೂಕಿನ ನಾವದಗಿ ಬ್ರಹನ್ಮಠದ ಷ.ಬ್ರ. ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಕವಿತಾಳದ ಶ್ರೀ ಮಠದಿಂದ ಗೌರವ ಸಮರ್ಪಣೆ ಸಲ್ಲಿಸಲಾಯಿತು.**



ರಾಯಚೂರು ಜಿಲ್ಲೆ ಸಿರವಾರ ತಾಲೂಕಿನ ಸುಕ್ಷೇತ್ರ ಕವಿತಾಳ ಪಟ್ಟಣದಲ್ಲಿ ಲಿಂಗೈಕ್ಯ ಸಿದ್ದಲಿಂಗ ಮಹಾಸ್ವಾಮಿಗಳ 50ನೇ ಪುಣ್ಯ ಸ್ಮರಣೋತ್ಸವ ಹಾಗೂ ಶ್ರೀ ಮ.ನಿ.ಪ್ರ. ಅಭಿನವ ಸಿದ್ದಲಿಂಗ ಮಹಾಸ್ವಾಮಿಗಳ 36ನೇ ಜನ್ಮ ವರ್ಧಂತಿ ಮಹೋತ್ಸವದ ನಿಮಿತ್ಯವಾಗಿ ಹಮ್ಮಿಕೊಂಡ ಮಹಾ ಶಿವಶರಣೆ ಇಟಗಿ ಶ್ರೀ ಭೀಮಾಂಬಿಕೆ ಪುರಾಣ ಮಂಗಲೋತ್ಸವ ಕಾರ್ಯಕ್ರಮದಲ್ಲಿ ಪೂಜ್ಯ ಷ.ಬ್ರ. ಶ್ರೀ ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಧರ್ಮ ಜಾಗೃತಿ ಮೂಡಿಸಲು ಶ್ರಮಿಸುತ್ತಿರುವ ಹಿನ್ನೆಲೆಯಲ್ಲಿ ಅವರಿಗೆ ಈ ಗೌರವ ಸಮರ್ಪಣೆಯನ್ನು ಮ.ನಿ.ಪ್ರ.ಶ್ರೀ ಅಭಿನವ ಸಿದ್ದಲಿಂಗ ಮಹಾಸ್ವಾಮಿಗಳು ಸಲ್ಲಿಸಿದರು. ಕಾರ್ಯಕ್ರಮದಲ್ಲಿ ನಾಡಿನ ಹರ ಚರ ಗುರುಮೂರ್ತಿಗಳು, ರಾಜಕೀಯ ದುರೀಣರು, ವಿವಿಧ ಸಂಘ–ಸಂಸ್ಥೆಗಳ ಮುಖ್ಯಸ್ಥರು ಪಟ್ಟಣದ ಹಿರಿಯರು ಗಣ್ಯರು ಹಾಗೂ ಅಪಾರ ಸಂಖ್ಯೆಯ ಭಕ್ತಾದಿಗಳು ಇದ್ದರು.

# ಯಡ್ರಾಮಿ ತಾಲ್ಲೂಕಿನಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಮನವಿ

**ನೈಜ್ಯ ದೆಸೆ ನ್ಯೂಸ್**

**ಯಡ್ರಾಮಿ: ತಾಲೂಕಿನಲ್ಲಿ ಸಮಗ್ರ ಅಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತೆ ಆಗ್ರಹಿಸಿ ಜೈ ಕನ್ನಡಿಗರ ಸೇನೆಯ ಯಡ್ರಾಮಿ ತಾಲೂಕ ಅಧ್ಯಕ್ಷರಾದ ಭರತ್ ಎಂ ದೊರೆ ಅವರು ಕಲಬುರಗಿ ಜಿಲ್ಲಾ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.**



ಯಡ್ರಾಮಿ ತಾಲೂಕ ಘೋಷಣೆಯಾಗಿದ್ದು ಹಲವು ವರ್ಷಗಳಾದರೂ ಅಗತ್ಯ ಮಟ್ಟಿನ ಸರ್ಕಾರಿ ಸೌಕರ್ಯಗಳು ಇನ್ನೂ ಸಮರ್ಪಕವಾಗಿ ಲಭ್ಯವಾಗಿಲ್ಲ. ಈ ಹಿನ್ನೆಲೆ ತಾಲ್ಲೂಕಿನಲ್ಲಿ ವಿವಿಧ ಇಲಾಖೆಗಳ ಸುಮಾರು 32 ಉಪ ಕಚೇರಿಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು ಎಂದು ಅವರು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಇದಲ್ಲದೆ, ಸ್ಥಳೀಯರಿಗೆ ಉದ್ಯೋಗಾವಕಾಶಗಳು ಹೆಚ್ಚಿಸಲು ಕೈಗಾರಿಕರಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ರಸ್ತೆ, ಕುಡಿಯುವ ನೀರು, ಆರೋಗ್ಯ ಮತ್ತು ಶಿಕ್ಷಣ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ತ್ವರಿತವಾಗಿ ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದು ಭರತ್ ಎಂ. ದೊರೆ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ. ತಾಲೂಕಿನ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಂಬಂಧಿತ ಅಧಿಕಾರಿಗಳು ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

# ಕವಿತಾಳ ಖಬರಸ್ಥಾನ ಸಾಮೂಹಿಕ ಶೌಚಾಲಯ ಭೂ ವಿವಾದಕ್ಕೆ ತೆರೆ: ಸರ್ವೆ ಕಾರ್ಯ ಯಶಸ್ವಿ

**ನೈಜ್ಯ ದೆಸೆ ನ್ಯೂಸ್**

**ಕವಿತಾಳ: ರಾಯಚೂರು ಜಿಲ್ಲೆ ಸಿರವಾರ ತಾಲೂಕಿನ ಕವಿತಾಳ ಪಟ್ಟಣದಲ್ಲಿ ಹಲವು ವರ್ಷಗಳಿಂದ ಮುಂದುವರಿದಿದ್ದ ಖಬರಸ್ಥಾನ ಹಾಗೂ ಸಾಮೂಹಿಕ ಶೌಚಾಲಯಕ್ಕೆ ಸಂಬಂಧಿಸಿದ ಭೂ ವಿವಾದಕ್ಕೆ ಕೊನೆಗೂ ಭಾಗಶಃ ಪರಿಹಾರ ದೊರೆತಿದೆ. ಸರ್ವೆ ಇಲಾಖೆಯ ಸಮಗ್ರ ಮಾಪನ ಕಾರ್ಯ ಯಶಸ್ವಿಯಾಗಿ ಪೂರ್ಣಗೊಂಡ ಹಿನ್ನೆಲೆಯಲ್ಲಿ, ಸ್ಥಳೀಯರಲ್ಲಿ ಉಂಟಾಗಿದ್ದ ಉದ್ವಿಗ್ನತೆ ತಣಿದಿದೆ.**



ಪಟ್ಟಣದ ಸರ್ವೆ ನಂ. 8ಕ್ಕೆ ಸಂಬಂಧಿಸಿದ ಈ ಜಾಗದಲ್ಲಿ ಕಳೆದ ನಾಲ್ಕು ದಶಕಗಳಿಂದ ಸಾರ್ವಜನಿಕ ಉಪಯೋಗಕ್ಕಾಗಿ ನಿರ್ಮಿಸಲ್ಪಟ್ಟಿದ್ದ ದೊಡ್ಡ ಸಾಮೂಹಿಕ ಶೌಚಾಲಯವೊಂದು ಕಾರ್ಯನಿರ್ವಹಿಸುತ್ತಿತ್ತು. ಐದು ವಾರ್ಡುಗಳಿಗೆ ಸೇರಿದ ಸಾವಿರಾರು ಮಹಿಳೆಯರು ಹಾಗೂ ಸಾರ್ವಜನಿಕರು ಈ ಸೌಲಭ್ಯವನ್ನು ಬಳಸುತ್ತಿದ್ದರು. ಆದರೆ, ಈ ಜಾಗ ಖಬರಸ್ಥಾನಕ್ಕೆ ಸೇರಿದೆ ಎಂಬ ವಿವಾದ ಉಂಟಾಗಿ, ಕೆಲ ವರ್ಷಗಳ ಹಿಂದೆ ಶೌಚಾಲಯವನ್ನು ನೆಲಸಮಗೊಳಿಸಲಾಗಿತ್ತು. ಈ ಘಟನೆಯ ನಂತರ ಸಮಸ್ಯೆ ಇನ್ನಷ್ಟು ಗಂಭೀರಗೊಂಡು, ಸಮುದಾಯಗಳ ನಡುವೆ ಅಸಮಾಧಾನ ಹಾಗೂ ಅಶಾಂತಿಯ ವಾತಾವರಣ ನಿರ್ಮಾಣವಾಗಿತ್ತು. ಈ ವಿವಾದವನ್ನು ರಾಜಕೀಯವಾಗಿ ಬಳಸಿಕೊಂಡು ಸಮುದಾಯಗಳ ನಡುವೆ ಭಿನ್ನಾಭಿಪ್ರಾಯಗಳನ್ನು ಉಂಟುಮಾಡುವ ಪ್ರಯತ್ನಗಳು ನಡೆದಿದ್ದವು ಎಂಬ ಆರೋಪಗಳೂ ಕೇಳಿಬಂದಿದ್ದವು.

ಆದರೆ, ಇತ್ತೀಚೆಗೆ ಸಂಘಟಿತ ಪ್ರಯತ್ನಗಳು ಹಾಗೂ ಮಧ್ಯಸ್ಥಿಕೆಯಿಂದ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಯಿತು. ಸರ್ವೆ ಕಾರ್ಯದ ಸಂದರ್ಭದಲ್ಲಿ ಸಂಬಂಧಿತ ಇಲಾಖೆಗಳಾದ ಕಂದಾಯ, ಸರ್ವೆ, ಪಟ್ಟಣ ಪಂಚಾಯತ್ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಎರಡೂ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಸಮಗ್ರ ಅಳತೆ ಕಾರ್ಯ ನಡೆಸಿದರು. ಈ ವೇಳೆ ಯಾವುದೇ ಅಹಿತಕರ ಘಟನೆಗಳಿಲ್ಲದೆ ಶಾಂತಿಯುತವಾಗಿ ಪ್ರಕ್ರಿಯೆ ಪೂರ್ಣಗೊಂಡಿತು.

ಮಾಪನದ ಆಧಾರದ ಮೇಲೆ ಖಬರಸ್ಥಾನದ ಭೂಮಿಯನ್ನು ಪ್ರತ್ಯೇಕವಾಗಿ ಗುರುತಿಸಿ ಹಸ್ತಾಂತರಿಸಲಾಗಿದ್ದು, ಸಾರ್ವಜನಿಕ ಉಪಯೋಗಕ್ಕಾಗಿ ಸಾಮೂಹಿಕ ಶೌಚಾಲಯ ನಿರ್ಮಾಣಕ್ಕೆ ಸುಮಾರು 29 ಗುಂಟೆ ಜಾಗವನ್ನು ಗುರುತಿಸಿ ಮೀಸಲಿರಿಸಲಾಗಿದೆ. ಈ ವಿಚಾರದಲ್ಲಿ ಕೆಲವು ಸಾಮಾಜಿಕ ಹಾಗೂ ರಾಜಕೀಯ ಸಂಘಟನೆಗಳ ಮುಖಂಡರು ಸಂಘಟಿತವಾಗಿ ಕಾನೂನುಬದ್ಧ ಹೋರಾಟ ನಡೆಸಿದ್ದು, ಸ್ಥಳೀಯ ಜನರ ಸಹಕಾರದಿಂದ ವಿವಾದ ಶಮನಗೊಳ್ಳಲು ನೆರವಾಗಿದೆ. ಸರ್ವೆ ಕಾರ್ಯದ ವೇಳೆ ಪಟ್ಟಣದ ನೂರಾರು ನಾಗರಿಕರು ಹಾಜರಿದ್ದು, ಪರಸ್ಪರ ಚರ್ಚೆ ಮತ್ತು ಒಪ್ಪಂದದ ಮೂಲಕ ಸಮಸ್ಯೆಗೆ ಅಂತಿಮ ತೆರೆ ಎಳೆಯುವಲ್ಲಿ ಸಹಕರಿಸಿದರು. ಇದೀಗ ಸ್ಥಳದಲ್ಲಿ ಶಾಂತಿ ಸ್ಥಾಪನೆಯಾಗಿದ್ದು, ಮುಂದಿನ ದಿನಗಳಲ್ಲಿ ಸಾರ್ವಜನಿಕ ಸೌಲಭ್ಯಗಳ ಅಭಿವೃದ್ಧಿಗೆ ಮಾರ್ಗ ಮುಕ್ತವಾಗಿದೆ.

ಈ ಸಂದರ್ಭದಲ್ಲಿ ಸಿಪಿಐ (ಎಂ ಎಲ್) ರೆಡ್ ಸ್ಟಾರ್ ಮುಖಂಡರಾದ ಆರ್ ಮಾನಸಯ್ಯ, ತಿಪ್ಪರಾಜ ಗೆಜ್ಜಘಟ್ಟ, ಆದೇಶ ನಗನೂರ, ಬಸವರಾಜ ನಾಯಕ ಹಿರೇಹೆಸರೂರು, ರಮೇಶ್ ನಾಯಕ ಹಿರೇಹೆಸರೂರು ಈ ವಿವಾದದ ಪರಿಹಾರಕ್ಕೆ ಸಂಘಟನಾತ್ಮಕವಾಗಿ, ಕಾನೂನಾತ್ಮಕವಾಗಿ ಮುತುವರ್ಜಿ ವಹಿಸಿದ್ದರು.

## ಸಾಹಿತ್ಯ ಸಿಂಚನ

ಅಮರ ಅವಿನಾ.!

ಅಲೆ ತೀರಗಳ
ತೀರದ ಅನುಬಂಧ
ನನ್ನ ನಿನ್ನ ಬಂಧ.!

ಗಾಳಿ ಗಂಧಗಳ
ಅಗಲಿಸದ ಹರಿವು
ನನ್ನ ನಿನ್ನ ಒಲವು.!

ಮುಗಿಲು ಕಡಲುಗಳ
ಮುಗಿಯದ ವಿನಿಮಯ
ನನ್ನ ನಿನ್ನ ಪ್ರಣಯ.!

ದುಂಬಿ ಹೂವುಗಳ
ಅವಿಚ್ಚಿನ್ನ ಸಂಭ್ರಮ
ನನ್ನ ನಿನ್ನ ಪ್ರೇಮ.!

ಕೊರಳು ಕೊಳಲುಗಳ
ಅನೂಹ್ಯ ಸಂಯೋಗ
ನನ್ನ ನಿನ್ನ ಅನುರಾಗ.!

ಮಧು ಕ್ಷೀರಗಳ
ಐಕ್ಯತೆಯ ಸಮ್ಮಿಲನ
ನನ್ನ ನಿನ್ನ ಮಿಲನ.!

ದೀಪ ಬತ್ತಿಗಳ
ಬೆಳಕಿನ ನಿಘಂಟು
ನನ್ನ ನಿನ್ನ ನಂಟು.!

ಲೌಕಿಕ ಅಲೌಕಿಗಳ
ವ್ಯಾಪ್ತಿಗೆಟುಕದ ವ್ಯಾಖ್ಯ
ನನ್ನ ನಿನ್ನಯ ಸಖ್ಯ.!

ಜನ್ಮ ಜನ್ಮಾಂತರಗಳ
ಚಿರಚಿರಂತನ ಒಸಗೆ
ನನ್ನ ನಿನ್ನ ಬೆಸುಗೆ.!

ಯುಗಯುಗಕು ಜಗಕೆ
ನಿದರ್ಶನದ ರೀತಿ
ಈ ರಾಧಾಮಾಧವ ಪ್ರೀತಿ.!

ಎ.ಎನ್.ರಮೇಶ್. ಗುಬ್ಬಿ.

# ಪಕ್ಷಾತೀತ ಪ್ರಗತಿಪರ ರೈತರ ಒಕ್ಕೂಟದಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಗೆ ಪ್ರಚಾರ ಆರಂಭ

ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ತಾಲೂಕಿನ ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯನ್ನು ಹಿನ್ನೆಲೆಯಾಗಿ ಜಾಲಹಳ್ಳಿ ಪಕ್ಷಾತೀತ ಪ್ರಗತಿಪರ ರೈತರ ಒಕ್ಕೂಟದ ಅಭ್ಯರ್ಥಿಗಳು ಇಂದು ಭರ್ಜರಿಯಾಗಿ ಪ್ರಚಾರ ಕಾರ್ಯವನ್ನು ಪ್ರಾರಂಭಿಸಿದರು. ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಪ್ರಚಾರಕ್ಕೆ ಚಾಲನೆ ನೀಡಲಾಯಿತು.**

ಈ ಸಂದರ್ಭದಲ್ಲಿ ಒಕ್ಕೂಟದ ಮುಖಂಡರಾದ ಶ್ರೀ ವೀರಣ್ಣ ಬಳೆ ಸಾಹುಕಾರ್ ಮಾತನಾಡಿ, "ಪಕ್ಷಾತೀತವಾಗಿ ರೈತರ ಪರವಾಗಿ ಕೆಲಸ ಮಾಡುವ ಉದ್ದೇಶದಿಂದಲೇ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೇವೆ. ರೈತರ ಹಿತದೃಷ್ಟಿಯಿಂದ ಕೆಲಸ ಮಾಡುವ ಈ 12 ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ರೈತರಿಗೆ ಉತ್ತಮ ಸೇವೆ ನೀಡಲು ಅವಕಾಶ ಮಾಡಿಕೊಡಬೇಕು" ಎಂದು ಮನವಿ ಮಾಡಿದರು.



ಹಾಗೂ, "ಸಹಕಾರ ಸಂಘವನ್ನು ಇನ್ನಷ್ಟು ಅಭಿವೃದ್ಧಿಪಡಿಸಿ ರೈತರಿಗೆ ಹೆಚ್ಚು ಅನುಕೂಲವಾಗುವಂತೆ ಮಾಡುವುದೇ ನಮ್ಮ ಮುಖ್ಯ ಗುರಿ" ಎಂದು ತಿಳಿಸಿದರು.

ಇದೇ ವೇಳೆ ಮತ್ತೊಬ್ಬ ಮುಖಂಡರಾದ ಚಂದಪ್ಪ ಬುದ್ದಿನ್ನಿ ಮಾತನಾಡಿ, "ನಮ್ಮ ಅಭ್ಯರ್ಥಿಗಳು ರೈತರಿಗಾಗಿ ಹಗಲು-ರಾತ್ರಿ ಶ್ರಮಿಸುವವರು. ರೈತರ ಹಿತ ಕಾಪಾಡುವುದು ನಮ್ಮ ಪ್ರಮುಖ ಉದ್ದೇಶವಾಗಿದ್ದು, ಎಲ್ಲಾ ಅಭ್ಯರ್ಥಿಗಳನ್ನು ಗೆಲ್ಲಿಸಲು ಸಾರ್ವಜನಿಕರು ಸಹಕರಿಸಬೇಕು" ಎಂದು ವಿನಂತಿಸಿದರು.

ಈ ಕಾರ್ಯಕ್ರಮದಲ್ಲಿ ವೀರಣ್ಣ ಬಳೆ ಸಾಹುಕಾರ್, ಅಮರೇಶ್ ಪಾಟೀಲ್, ಶಂಕರ್ ಗೌಡ ಮಾಲಿ ಪಾಟೀಲ್, ಚೆನ್ನಮ್ಮಮಠ ತಾತ, ರಂಗನಾಥ ಮಾಕಾಶಿ, ಚಂದಪ್ಪ ಬುದ್ದಿನ್ನಿ, ಗೌಡಪ್ಪ ವಡ್ಡರ್, ರಮೇಶ್ ಆನ್ವರಿ, ಗಂಗಪ್ಪ ತಗ್ಗಳ್ಳಿ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಒಕ್ಕೂಟದ ಅಭ್ಯರ್ಥಿಗಳಾದ ಖುರಸಿದ್ ಪಟೇಲ್, ಆನಂದ್ ಪಾಟೀಲ್, ಯಂಕೋಬ ಪೂಜಾರಿ, ಗೋವಿಂದಪ್ಪ ಹಲಗೇರಿ, ರಂಗಪ್ಪ ಬಂಡಿ, ಈಶಣ್ಣ ಕಾಟಮಳ್ಳಿ, ಅಮರೇಗೌಡ, ವೆಂಕೋಬ ಯರಗಮಟ್ಟಿ, ನವೀನ್ ಪಾಟೀಲ್, ಸಾಬಯ್ಯ ಹೆಚ್ ಸಿದ್ದಾಪುರ ಹಾಗೂ ಸಾಬಯ್ಯ ಕರಡಿಗುಡ್ಡ ಈ ಸಂದರ್ಭದಲ್ಲಿ ಹಾಜರಿದ್ದರು. ಚುನಾವಣೆಯಲ್ಲಿ ಭಾರಿ ಪೈಪೋಟಿ ನಿರೀಕ್ಷೆಯಾಗಿದ್ದು, ಗ್ರಾಮದಲ್ಲಿ ರಾಜಕೀಯ ಚಟುವಟಿಕೆಗಳು ದಿನೇ ದಿನೇ ಚುರುಕುಗೊಳ್ಳುತ್ತಿವೆ.

# ಬಂಗಾರಿ ಕ್ಯಾಂಪ್‌ನಲ್ಲಿ 14 ವರ್ಷದ ಶಾಲಾ ಹೆಣ್ಣು ಮಕ್ಕಳಿಗೆ ಹೆಚ್‌ಪಿವಿ ಲಸಿಕೆ.





ನೈಜ್ಯ ದೆಸೆ ನ್ಯೂಸ್

**ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು, ಪ್ರಾಥಮಿಕ ಆರೋಗ್ಯ ಕೇಂದ್ರ ದಡೆಸುಗೂರು ಇವರ ಸಂಯುಕ್ತ ಆಶ್ರಯದಲ್ಲಿ ಲಕ್ಷ್ಮಿ ಕ್ಯಾಂಪ್ ಉಪ ಕೇಂದ್ರ ವ್ಯಾಪ್ತಿಯ ಬಂಗಾರಿ ಕ್ಯಾಂಪ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗರ್ಭಕಂಠ ಕ್ಯಾನ್ಸರ್ ತಡೆಗಾಗಿ ಹಾಕಲಾಗುವ ಹೆಚ್‌ಪಿವಿ ಲಸಿಕೆಯ ಕುರಿತು ಜಾಗೃತಿಗಾಗಿ ಏರ್ಪಡಿಸಿದ ಪೋಷಕರ ಸಭೆಯಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಮಾತನಾಡಿ,**

ಗರ್ಭಕಂಠ ಕ್ಯಾನ್ಸರ್ ಹೆಣ್ಣು ಮಕ್ಕಳ ಜೀವನದಲ್ಲಿ ಅತ್ಯಂತ ಗಂಭಿರವಾಗಿದ್ದು, ಗರ್ಭ ಕೊರಳಿಗೆ ಸಂಬಂಧಪಟ್ಟ ಆಗುವ ಸೊಂಕುಗಳಿಂದ ಸಂರಕ್ಷಿಸಲು ಎಚ್‌ಪಿವಿ ಲಸಿಕೆ ಅತ್ಯಂತ ಅಗತ್ಯವಾಗಿರುವುದರಿಂದ ತಪ್ಪು ವದಂತಿಗಳಿಗೆ ಆಸ್ಪದ ನೀಡದೆ, ತಮ್ಮ ಮಕ್ಕಳಿಗೆ ಲಸಿಕೆಯನ್ನು ಹಾಕಿಸಲು ಸಹಕರಿಸಿ ಎಂದು ತಿಳಿಸಿದರು. ನಂತರ ಮಕ್ಕಳಿಗೆ ಹೆಚ್‌ಪಿವಿ ಲಸಿಕೆ ಯಶಸ್ವಿಯಾಗಿ ಹಾಕಲಾಯಿತು. ಸದರಿ ಕಾರ್ಯಕ್ರಮದಲ್ಲಿ ಪಿಹೆಚ್‌ಸಿಓ ಶಾಹಿಲಾ ಬೇಗಂ, ಮುಖ್ಯ ಗುರುಗಳಾದ ಶಿವಲಿಂಗಮ್ಮ, ಆಶಾ ಕಾರ್ಯಕರ್ತೆ ಅಂಬಿಕಾ, ಪೋಷಕರಾದ ರಾಘವೇಂದ್ರ, ರಾಜು, ಮೀನಾಕ್ಷಿ ಮುಂತಾದವರು ಉಪಸ್ಥಿತರಿದ್ದರು.

## ಪೆಟ್ರೋಲ್-ಡೀಸೆಲ್ ಕೊರತೆ ವದಂತಿ :ರಾಜ್ಯ ಸರ್ಕಾರದಿಂದ ಸ್ಪಷ್ಟನೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಕೊರತೆಯಾಗಿದೆ ಎಂಬ ವದಂತಿಗಳು ಹರಿದಾಡುತ್ತಿದೆ. ಈ ಕುರಿತು ರಾಜ್ಯ ಸರ್ಕಾರ ಸ್ಪಷ್ಟನೆ ನೀಡಿದ್ದು, ರಾಜ್ಯದ ಕೆಲವು ಭಾಗಗಳಲ್ಲಿ ಜನರು ಪೆಟ್ರೋಲ್ ಬಂಕ್‌ಗಳ ಮುಂದೆ ಕ್ಯೂನಲ್ಲಿ ನಿಂತಿದ್ದಾರೆ ಎಂಬ ವರದಿಗಳಿಂದ ಭಯಭೀತರಾಗಿ ಖರೀದಿಗೆ ಮುಂದಾಗಬೇಡಿ.ಗೊಂದಲಗಳಿಗೆ ಕಿವಿಗೊಡಬೇಡಿ ಎಂದು ಮನವಿ ಮಾಡಿದೆ.**



ದೇಶಾದ್ಯಂತ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಸಾಕಷ್ಟು ಇಂಧನ ಸಂಗ್ರಹವಿದೆ ಎಂದು ಕೇಂದ್ರ ಸ್ಪಷ್ಟಪಡಿಸಿದೆ ಎಂದು ರಾಜ್ಯ ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ.ರಾಜ್ಯದ ಕೆಲವು ಭಾಗಗಳಲ್ಲಿ ಜನರು ಬಾಟಲಿಗಳು ಮತ್ತು ಕ್ಯಾನ್‌ಗಳಂತಹ ಕಂಟೈನರ್ಗಳೊಂದಿಗೆ ಪೆಟ್ರೋಲ್ ಪಂಪ್‌ಗಳಲ್ಲಿ ಸರತಿ ಸಾಲಿನಲ್ಲಿ ನಿಂತಿದ್ದಾರೆ ಎಂದು ವಿವಿಧ ಮಾಧ್ಯಮಗಳ ವರದಿಗಳು ಸರ್ಕಾರದ ಗಮನಕ್ಕೆ ಬಂದಿದೆ. ಇದು ಪೆಟ್ರೋಲ್ ಮತ್ತು ಡೀಸೆಲ್ ಕೊರತೆಯನ್ನು ಸೂಚಿಸುವ ಸುಳ್ಳು ವದಂತಿಗಳಾಗಿವೆ ಎಂದು ಹೇಳಿದೆ. ಗಂಭೀರ ಸುರಕ್ಷತಾ ಅಪಾಯಗಳು ಮತ್ತು ಬೆಂಕಿಯ ಅಪಾಯಗಳನ್ನು ಉಲ್ಲೇಖಿಸಿ, ಸಡಿಲವಾದ ಅಥವಾ ಸೂಕ್ತವಲ್ಲದ ಪಾತ್ರೆಗಳಲ್ಲಿ ಪೆಟ್ರೋಲ್ ಸಾಗಿಸುವುದು ಅಥವಾ ಸಂಗ್ರಹಿಸುವುದರ ವಿರುದ್ಧ ಜನರಿಗೆ ಸಲಹೆ ನೀಡಿದೆ. ವಾಹನದ ಟ್ಯಾಂಕ್‌ಗಳಿಗೆ ಮಾತ್ರ ಇಂಧನವನ್ನು ನೇರವಾಗಿ ಪೂರೈಸಲು ಚಿಲ್ಲರೆ ಮಾರಾಟ ಮಳಿಗೆಗಳಿಗೆ ಸೂಚನೆ ನೀಡಿದೆ. ಬಾಟಲಿಗಳು, ಕ್ಯಾನ್‌ಗಳು ಅಥವಾ ಯಾವುದೇ ಬಾಹ್ಯ ಪಾತ್ರೆಗಳಲ್ಲಿ ಇಂಧನ ವಿತರಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಜಾರಿಯಲ್ಲಿರುವ ಕಾನೂನುಗಳ ಪ್ರಕಾರ, ದೊಡ್ಡ ಪ್ರಮಾಣದಲ್ಲಿ ಅಥವಾ ಅನಧಿಕೃತ ಕಂಟೈನರ್‌ಗಳಲ್ಲಿ ಇಂಧನ ಸಂಗ್ರಹಿಸುವುದು ಕಾನೂನುಬಾಹಿರವಾಗಿದೆ ಎಂದು ಎಚ್ಚರಿಕೆ ನೀಡಿದೆ. ಇಂಧನ ಪೂರೈಕೆ ಸಮರ್ಪಕವಾಗಿದ್ದು, ಆತಂಕಕ್ಕೆ ಯಾವುದೇ ಕಾರಣವಿಲ್ಲ ಎಂದು ಸರ್ಕಾರ ಭರವಸೆ ನೀಡಿದೆ.

# ಪೌಷ್ಟಿಕ ಆಹಾರ ಹಾಗೂ ಮಕ್ಕಳ ಆರೋಗ್ಯದ ಕಡೆಗೆ ತಾಯಿಯ ಗಮನ ಅಗತ್ಯ: ನಿಂಗಮ್ಮ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳು

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಸಮೀಪದ ಪುನರ್ವಸತಿ ಕೇಂದ್ರದ ಬಾದರ್ಲಿ ಬಸವನಗೌಡ ಬಡಾವಣೆ ಅಂಗನವಾಡಿ ಕೇಂದ್ರದಲ್ಲಿ ತಾಯಿಂದಿರಿಗೆ ಪೌಷ್ಟಿಕ ಆಹಾರದ ಮಹತ್ವ ಕುರಿತು ಮಾಹಿತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.**

ಕಾರ್ಯಕ್ರಮದ ಕುರಿತು ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ. ಮಗುವಿನ ಆರೈಕೆ ಮಾಡುವುದು ಬಹಳ ಮಹತ್ವದ್ದು ಹುಟ್ಟಿದ ಅರ್ಧ ಗಂಟೆಯಿಂದ ಆರು ತಿಂಗಳು ವರೆಗೆ ತಾಯಿ ಎದೆ ಹಾಲು ಬಹಳ ಮಹತ್ವದ್ದು ಮಗುವಿಗೆ ಸರಿಯಾದ ರೀತಿಯಲ್ಲಿ ಎದೆ ಹಾಲುಣಿಸುವುದು ಮಗುವಿನ ಆರೋಗ್ಯದ ಬೆಳವಣಿಗೆ ಸಹಕಾರಿ ಮಗುವಿನ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಬೆಳವಣಿಗೆ ಅಗತ್ಯವಾಗಿದೆ ತಾಯಿಯ ಮೊದಲ ಗಿಣ್ಣು ಹಾಲು ಮಗುವಿನ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದರು.



ನಂತರ ಮಾತನಾಡಿದ ನಿಂಗಮ್ಮ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳು ಮಗುವಿನ ಆರೋಗ್ಯದ ಬೆಳವಣಿಗೆ ಆರು ತಿಂಗಳು ಕಾಲ ಎದೆ ಹಾಲು ಅವಶ್ಯಕವಾಗಿದೆ ಆರು ತಿಂಗಳು ನಂತರದ ದಿನಗಳಲ್ಲಿ ಮಕ್ಕಳಿಗೆ ಎದೆ ಹಾಲು ಜೊತೆಯಲ್ಲಿ ಲಘುವಾದ ಪೌಷ್ಟಿಕ ಆಹಾರ ಅಗತ್ಯವಿದೆ ಹಾಲಿನ ಜೊತೆಯಲ್ಲಿ ದ್ರವ ರೂಪದ ಅಹಾರವನ್ನು ಕೊಡುವುದು ಬಹಳಷ್ಟು ಅವಶ್ಯಕವಾಗಿದೆ ಬಾಲ್ಯದಲ್ಲಿ ಮಕ್ಕಳು ಆರೋಗ ಬೆಳವಣಿಗೆ ಜೊತೆಯಲ್ಲಿ ಬಾಲ್ಯವಸ್ಥೆ ಬರುವ ಕಾರ್ಯಗಳನ್ನು ತಡೆಗಟ್ಟಲು ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಲಸಿಕೆಯನ್ನು ಕಡ್ಡಾಯವಾಗಿ ಕೊಡಸಿಬೇಕು ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಸಮಯಕ್ಕೆ ಸರಿಯಾಗಿ ಆರೋಗ್ಯ ತಪಾಸಣೆ ಮಾಡಿಸಿ ಬಹಳಷ್ಟು ಅವಶ್ಯಕವಾಗಿದೆ.



ಸುರಕ್ಷಿತ ಹೆರಿಗೆ ಮತ್ತು ಸುರಕ್ಷಿತ ಬಾಲ್ಯ ನಮ್ಮದಾಗಿರಲಿ ತಾಯಿ ಮತ್ತು ಮಗುವಿನ ಆರೋಗ್ಯದ ಸುರಕ್ಷತೆಗಾಗಿ ಆಗಾಗ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳನ್ನು ಮತ್ತು ಆಶಾ ಕಾರ್ಯಕರ್ತರನ್ನು ಭೇಟಿ ಮಾಡಿ ಸಮಯಕ್ಕೆ ಸರಿಯಾಗಿ ವೈದ್ಯರನ್ನು ಭೇಟಿಯಾಗಿ ಆರೋಗ್ಯ ತಪಾಸಣೆ ಕೊಳ್ಳಿ ಎಂದರು. ಈ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತರಾದ ಆದಿಲಕ್ಷ್ಮಿ, ವಿಜಯಲಕ್ಷ್ಮಿ, ಆಶಾ ಕಾರ್ಯಕರ್ತರದ ಲಕ್ಷ್ಮಿ, ತಾಯಂದಿರು ಹಾಗೂ ಸಾರ್ವಜನಿಕರು ಹಾಜರಿದ್ದರು.

# ಶ್ರೀ ರಾಮನವಮಿ ಪ್ರಯುಕ್ತ ಕೆ ಆರ್ ಎಸ್ ಪಕ್ಷದ ವತಿಯಿಂದ ಸಿಹಿ ಪಾನಕ ಮತ್ತು ಮಜ್ಜಿಗೆ ವಿತರಣೆ.






ನೈಜ್ಯ ದೆಸೆ ನ್ಯೂಸ್

**ಗಂಗಾವತಿ: ಶ್ರೀ ರಾಮನವಮಿ ಹಬ್ಬದ ಅಂಗವಾಗಿ ಆರ್‌ಎಸ್ ಪಕ್ಷದ ವತಿಯಿಂದ ಗುರುವಾರದಂದು ಗಂಗಾವತಿ ತಾಲೂಕಿನ ಬಸ್ ನಿಲ್ದಾಣ ಮುಂದೆ ಸಾರ್ವಜನಿಕರಿಗೆ ಸಿಹಿ ಪಾನಕ ಮತ್ತು ಮಜ್ಜಿಗೆ ವಿತರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.**

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ರಾಜ್ಯ ರೈತ ಘಟಕದ ಕಾರ್ಯದರ್ಶಿ ನಿರುಪಾದಿ ಕೆ ಗೋಮರ್ಸಿ ಯವರು ಈ ಕಾರ್ಯಕ್ರಮವು ಶ್ರೀರಾಮನ ಜನ್ಮೋತ್ಸವದ ಸಂಭ್ರಮವನ್ನು ಹಂಚಿಕೊಳ್ಳುವ ಉದ್ದೇಶದಿಂದ ಹಾಗೂ ಬೇಸಿಗೆ ಕಾಲದಲ್ಲಿ ಸಾರ್ವಜನಿಕರಿಗೆ ತಂಪು ಪಾನೀಯಗಳನ್ನು ಒದಗಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿದ್ದು ರಾಮನವಮಿ ಹಬ್ಬವು ಧರ್ಮ,ಸತ್ಯ ಮತ್ತು ನ್ಯಾಯದ ಸಂಕೇತವಾಗಿದ್ದು, ಸಮಾಜದಲ್ಲಿ ಸೌಹಾರ್ದತೆ ಮತ್ತು ಏಕತೆಯನ್ನು ಬೆಳೆಸುವ ಸಂದೇಶವನ್ನು ನೀಡುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪಕ್ಷದ ಕೊಪ್ಪಳ ಜಿಲ್ಲಾ ಸಂಚಾಲಕರಾದ ಗಣೇಶ ಅಮೃತ್, ಮೈನುದ್ದೀನ್, ಗಣೇಶ್ ಸಾರಂಗಿ ತಾಲೂಕ ಗಂಗಾವತಿ ತಾಲೂಕು ಅಧ್ಯಕ್ಷರಾದ ಶಾಮಿದ್ ಅಲಿ, ಉಪಾಧ್ಯಕ್ಷರಾದ ಕಂಬಳಿ ನಾಗಪ್ಪ, ಕಾರ್ಯದರ್ಶಿಗಳಾದ ಮೆಹಬೂಬ್ ,ಗಣೇಶ್ ಶಿಂಧೆ, ಯಾಕುಬ್, ಹನುಮೇಶ್ ಕೆ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಹೆಣ್ಣೆಂದರೆ ಶೋಕ ಅಲ್ಲ ಹೆಣ್ಣೆಂದರೆ ಸಂಸ್ಕೃತಿ :ಶ್ರೀದೇವಿ ಬಳಿಗಾರ ವಕೀಲರು

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಹೆಣ್ಣೆಂದರೆ ಪೀಡೆ ಅಲ್ಲ ಹೆಣ್ಣೆಂದರೆ ಶಕ್ತಿ, ಹೆಣ್ಣೆಂದರೆ ಶೋಕ ಅಲ್ಲ ಹೆಣ್ಣೆಂದರೆ ಸಂಸ್ಕೃತಿ ಎಂದು ಶ್ರೀದೇವಿ ಬಳಿಗಾರ ಹೇಳಿದರು. ಪಟ್ಟಣದ ಶಾರದಾ ವಿದ್ಯಾನಿಕೇತನ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ) ಮಾನ್ವಿ ಹಾಗೂ ತಾಲೂಕ ಕಾನೂನು ಸೇವಾ ಸಮಿತಿ, ಮಾನ್ವಿ ತಾಲೂಕ ಅಧಿಕಾರಿಗಳು ಮಾನ್ವಿ ಇವರ ಸಂಯುಕ್ತ ಆಶ್ರಯದಲ್ಲಿ ಕಾನೂನು ಅರಿವು ಹಾಗೂ ನೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**

ಶ್ರೀದೇವಿ ಬಳಿಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಪ್ರತಿಯೊಬ್ಬ ಮಹಿಳೆಯರು ಇಂದು ಎಲ್ಲಾ ಕ್ಷೇತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಉತ್ತಮವಾದ ಬದುಕನ್ನು ಕಟ್ಟಿ ಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಇಂದಿನ ಹೆಣ್ಣು ಅಬಲೆಯಲ್ಲ ಸಬಲೆಯಾಗಿದ್ದಾಳೆ.




ಮಹಿಳೆಯರಿಗೆ ಇತ್ತೀಚಿನ ದಿನಮಾನಗಳಲ್ಲಿ ಮಹಿಳೆಯರ ಕಾನೂನುಗಳು ದುರ್ಬಳಕೆ ಆಗುತ್ತಿರುವುದು ಬಹಳ ದುರಂತದ ಸಂಗತಿಯಾಗಿದೆ. ಕೌಟುಂಬಿಕ ದೌರ್ಜನ್ಯ ಕಾಯ್ದೆ ಗಳು, ವರದಕ್ಷಿಣೆ ಕಾಯ್ದೆಗಳು, ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ಕಿರುಕುಳ ಇನ್ನು ಹಲವಾರು ಕಾನೂನುಗಳು ಇದ್ದರು ಕೂಡ ಮಹಿಳೆಯರ ಮೇಲೆ ಮತ್ತು ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯಗಳು ನಡೀತಾ ಇದಾವೆ ಇವುಗಳನ್ನು ತಡೆಗಟ್ಟಬೇಕೆಂದರೆ ಮಹಿಳೆಯರು ಎಚ್ಚೆತ್ತುಕೊಂಡು ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು ಜಾಗೃತಿ ಮೂಡಿಸಿದಾಗ ಮಹಿಳೆಯರಿಗೆ ಸಮಾಜದಲ್ಲಿ ಸಾಮಾಜಿಕ ಸ್ಥಾನ ಮಾನಗಳು ದೊರಕಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಡಾ. ಕಾವ್ಯ ಲಕ್ಷ್ಮೀ ವೈದ್ಯರು ಮಾತನಾಡಿ ಒಬ್ಬ ಮಹಿಳೆಯ ಹಿಂದೆ ಒಬ್ಬ ಪುರುಷನ ಸಹಕಾರ ಇದ್ದರೆ ಸಮಾಜದಲ್ಲಿ ಒಳ್ಳೇಯ ಸ್ಥಾನ ಗಳಿಸಲು ಸಾಧ್ಯವಾಗುತ್ತದೆ. ಹೆಣ್ಣುಮಕ್ಕಳು ಎಂಥಹ ಕಷ್ಟ ಬಂದರು ಶಿಕ್ಷಣ ವನ್ನು ಕುಂಟಿತಗೊಳಿಸದೇ ಉತ್ತಮವಾಗಿ ಅಭ್ಯಾಸ ಮಾಡಿ ಉನ್ನತ ಸ್ಥಾನ ಪಡೆದು ಕೊಳ್ಳಿ ಎಂದು ಹೇಳಿದರು. ಕಾರ್ಯಕ್ರಮದ ಕುರಿತು ಮಂಜುಳಾ ಕಿಶೋರ್ ಕುಮಾರ ಮಾತನಾಡಿದರು. ಹಾಗೂ ಈರಣ್ಣ ಮರ್ಲಟ್ಟಿ ಉಪನ್ಯಾಸಕರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಡಾ ಹೈಂದವಿ ಮಧುಸೂದನ್ ಗುಪ್ತಾಜಿ ಕಾರ್ಯದರ್ಶಿ ಶಾರದಾ ಶಿಕ್ಷಣ ಸಂಸ್ಥೆಯಯವರು ಮಾತನಾಡಿ ಜೀವನ ಎನ್ನುವುದು ಯಾವ ಸಮಯದಲ್ಲಿ ಹೇಗೆ ಕಷ್ಟ ಬರುತ್ತೆ ಅದನ್ನು ಸ್ವೀಕರಿಸಬೇಕು ಎಂತಹ ಕಷ್ಟಗಳು ಬಂದರು ಹೆದುರಿಸುವ ಧೈರ್ಯ ಇರಬೇಕು ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಉಮಾಮಹೇಶ್ವರಿ ಮದುಸೂಧನ ಗುಪ್ತಾಜಿ ಅಧ್ಯಕ್ಷರು ಶಾರದಾ ಶಿಕ್ಷಣ ಸಂಸ್ಥೆ ಮಾನ್ವಿ, ಜಿ.ಎಸ್ ವರ್ಷಿತಾ,ಉಪಪ್ರಚಾರ್ಯರಾದ ವೀರಭದ್ರಯ್ಯ ಹಿರೇಮಠ ಉಪನ್ಯಾಸಕರು ಹಾಗೂ ಬಿ.ಈಡಿ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಪ್ರಿಯದರ್ಶಿನಿ ಪ್ರಶಿಕ್ಷಣಾರ್ಥಿ ಹಾಗೂ ಬಂಡೆಮ್ಮ ನಿರೂಪಿಸಿದರು. ಲಲಿತಾ ಪ್ರಾರ್ಥನೆ ಗೀತೆಯನ್ನು ಹಾಡಿದರು. ವನಿತಾ ಸ್ವಾಗತಿಸಿದರು. ಅಂಬಿಕಾ ವಂದಿಸಿದರು.

## ನೇಮಕಾತಿ ಪ್ರಕಟಣೆ

RRB ನೇಮಕಾತಿ 2026–11127 ಸಹಾಯಕ ಲೋಕೋ ಪೈಲಟ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮಾರ್ಚ್ 26, 2026 ಖಖಃ ನೇಮಕಾತಿ 2026: 11127 ಸಹಾಯಕ ಲೋಕೋ ಪೈಲಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರೈಲ್ವೆ ನೇಮಕಾತಿ ಮಂಡಳಿಯು ಮಾರ್ಚ್ 2026 ರ ಖಖಃ ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಲೋಕೋ ಪೈಲಟ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 14–ಜೂನ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 15–05–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 14–ಜೂನ್–2026 ಅಧಿಕೃತ ವೆಬ್‌ಸೈಟ್: indianrailways.gov.in

# ಅಸಹಾಯಕರಿಗೆ ಆಸರೆಯಾದ ವಾತ್ಸಲ್ಯ ಮನೆ ? ಶರಣು ಹುಣಸಗಿ

**ನೈಜ್ಯ ದೆಸೆ ನ್ಯೂಸ್**


**ದೇವದುರ್ಗ: ತಾಲೂಕಿನ ಗಲಗ ವಲಯದ ಮುಂಡರಗಿ ಕಾರ್ಯ ಕ್ಷೇತ್ರದಲ್ಲಿ ಮಾಸಾಶನ ಫಲಾನುಭವಿಯಾದ ಶ್ರೀಮತಿ ರೇಣುಕಮ್ಮ ಅವ–ರಿಗೆ ವಾತ್ಸಲ್ಯ ಮನೆ ನಿರ್ಮಿಸಿ ಈ ದಿನ ಹಸ್ತಾಂತರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**

ಈ ಕಾರ್ಯಕ್ರಮದಲ್ಲಿ ಕೊಪ್ಪಳ ಪ್ರಾದೇಶಿಕ ವ್ಯಾಪ್ತಿಯ ಗೌರವಾನ್ವಿತ ಪ್ರಾದೇಶಿಕ ನಿರ್ದೇಶಕರಾದ ಶ್ರೀ ಚಂದ್ರಶೇಖರ ಜೆ ಅವರು ಮಾತನಾಡಿ, ಪರಮಪೂಜ್ಯ ಡಾ. ವೀರೇಂದ್ರ ಹೆಗ್ಗಡೆ ಹಾಗೂ ಮಾತೃಶ್ರೀ ಹೇಮಾವತಿ ಅಮ್ಮನವರ ಆಶಾದಾಯಕ ವಾತ್ಸಲ್ಯ ಯೋಜನೆಯಡಿ ರೇಣುಕಮ್ಮ ಅವರಿಗೆ ಮನೆ ನಿರ್ಮಿಸಿ ನೀಡಿರುವುದು ಅತ್ಯಂತ ಶ್ಲಾಘನೀಯ ಕಾರ್ಯ ಎಂದರು. ಯೋಜನೆಯಡಿಯಲ್ಲಿ ಸುಮಾರು 1000ಕ್ಕೂ ಹೆಚ್ಚು ವಾತ್ಸಲ್ಯ ಮನೆಗಳನ್ನು ನಿರ್ಮಿಸಲಾಗಿದ್ದು, ದೇವದುರ್ಗ ತಾಲೂಕಿನಲ್ಲಿ 48 ಮಾಸಾಶನ ಫಲಾನುಭವಿಗಳು ಇದ್ದಾರೆ ಎಂದು ವಿವರಿಸಿದರು.

ಆಶ್ರಯವಿಲ್ಲದ ಅಸಹಾಯಕರಿಗೆ ನೆಲೆ ಕಲ್ಪಿಸುವ ಮೂಲಕ ಅವರ ಬದುಕಿಗೆ ಬೆಳಕು ನೀಡುತ್ತಿರುವ ಈ ಯೋಜನೆ ಸಮಾಜ–








ಕ್ಕೆ ಮಾದರಿಯಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ರಾಯಚೂರು ಜಿಲ್ಲಾ ನಿರ್ದೇಶಕರಾದ ರಾಘವೇಂದ್ರ ಪಟಗಾರ ಹಾಗೂ ಜಾಲಹಳ್ಳಿ ಪಿಎಸ್‌ಐ ಶ್ರೀಮತಿ ವೈಶಾಲಿ ಝುಳಕಿ ಅವರು ಯೋಜನೆಯ ಸೇವಾ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮುಂಡರಗಿ ಗ್ರಾಮದ ಶ್ರೀ ಶಿವರಾಯ ದೇವಸ್ಥಾನದ ಪೂಜಾರಿಗಳಾದ ನರಸಣ್ಣ ತಾತ ಅವರು ಆಶೀರ್ವಚನ ನೀಡಿದರು.

ಯೋಜನಾಧಿಕಾರಿಗಳಾದ ವೇಣುಗೋಪಾಲ ಸರ್, ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯರಾದ ಶರಣು ಹುಣಸಗಿ, ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಬಾಲಯ್ಯ ಸೇರಿದಂತೆ ಗಣ್ಯರ ಸಮ್ಮುಖದಲ್ಲಿ ಶ್ರೀಮತಿ ರೇಣುಕಮ್ಮ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಮಾಡಲಾಯಿತು. “ಮಂಜುನಾಥ ಸ್ವಾಮಿಯ ಆಶೀರ್ವಾದ ಸದಾ ನಿಮ್ಮ ಮೇಲಿರಲಿ” ಎಂದು ಶುಭ ಹಾರೈಸಲಾಯಿತು. ಗ್ರಾಮದ ಗಣ್ಯರು ಮಾತನಾಡಿ, ಧರ್ಮಸ್ಥಳವು ಮಿನಿ ಸರ್ಕಾರದಂತೆ ಸಮಾಜಕ್ಕೆ ಅಗತ್ಯವಾದ ಹಲವಾರು ಸೇವಾ ಕಾರ್ಯಗಳನ್ನು ನಿರಂತರವಾಗಿ ಮಾಡುತ್ತಿದೆ ಎಂದು ಪ್ರಶಂಸಿಸಿದರು.

ಇಂತಹ ಪುಣ್ಯದ ಕೆಲಸಗಳಿಗೆ ನಾವು ಎಲ್ಲರೂ ಸಹಕರಿಸುತ್ತೇವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜ್ಞಾನ ವಿಕಾಸ ಸಮನ್ವಯಾಧಿಕಾರಿ ಅಶ್ವಿನಿ ಮೇಡಂ ಸ್ವಾಗತಿಸಿದರು. ವಲಯ ಮೇಲ್ವಿಚಾರಕರಾದ ಭರತ್ ಕುಮಾರ್ ಸರ್ ಧನ್ಯವಾದಗಳನ್ನು ಅರ್ಪಿಸಿದರು. ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು, ಸೇವಾ ಪ್ರತಿನಿಧಿಗಳು ಹಾಗೂ ಗಿಐಇ ಸಂಘದ ಸದಸ್ಯರು ಭಾಗವಹಿಸಿದ್ದರು.

## ಹೆಣ್ಣೆಂದರೆ ಶೋಕ ಅಲ್ಲ ಹೆಣ್ಣೆಂದರೆ ಸಂಸ್ಕೃತಿ : ಶ್ರೀದೇವಿ ಬಳಿಗಾರ ವಕೀಲರು

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಹೆಣ್ಣೆಂದರೆ ಪೀಡೆ ಅಲ್ಲ ಹೆಣ್ಣೆಂದರೆ ಶಕ್ತಿ, ಹೆಣ್ಣೆಂದರೆ ಶೋಕ ಅಲ್ಲ ಹೆಣ್ಣೆಂದರೆ ಸಂಸ್ಕೃತಿ ಎಂದು ಶ್ರೀದೇವಿ ಬಳಿಗಾರ ಹೇಳಿದರು. ಪಟ್ಟಣದ ಶಾರದಾ ವಿದ್ಯಾನಿಕೇತನ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ) ಮಾನ್ವಿ ಹಾಗೂ ತಾಲೂಕ ಕಾನೂನು ಸೇವಾ ಸಮಿತಿ, ಮಾನ್ವಿ ತಾಲೂಕ ಅಧಿಕಾರಿಗಳು ಮಾನ್ವಿ ಇವರ ಸಂಯುಕ್ತ ಆಶ್ರಯದಲ್ಲಿ ಕಾನೂನು ಅರಿವು ಹಾಗೂ ನೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**



ಶ್ರೀದೇವಿ ಬಳಿಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಪ್ರತಿಯೊಬ್ಬ ಮಹಿಳೆಯರು ಇಂದು ಎಲ್ಲಾ ಕ್ಷೇತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಉತ್ತಮವಾದ ಬದುಕನ್ನು ಕಟ್ಟಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಇಂದಿನ ಹೆಣ್ಣು ಅಬಲೆಯಲ್ಲ ಸಬಲೆಯಾಗಿದ್ದಾಳೆ. ಮಹಿಳೆಯರಿಗೆ ಇತ್ತೀಚಿನ ದಿನಮಾನಗಳಲ್ಲಿ ಮಹಿಳೆಯರ ಕಾನೂನುಗಳು ದುರ್ಬಳಕೆ ಆಗುತ್ತಿರುವುದು ಬಹಳ ದುರಂತದ ಸಂಗತಿಯಾಗಿದೆ. ಕೌಟುಂಬಿಕ ದೌರ್ಜನ್ಯ ಕಾಯ್ದೆ ಗಳು , ವರದಕ್ಷಿಣೆ ಕಾಯ್ದೆಗಳು, ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ಕಿರುಕುಳ ಇನ್ನು ಹಲವಾರು ಕಾನೂನುಗಳು ಇದ್ದರು ಕೂಡ ಮಹಿಳೆಯರ ಮೇಲೆ ಮತ್ತು ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯಗಳು ನಡೀತಾ ಇದಾವೆ ಇವುಗಳನ್ನು ತಡೆಗಟ್ಟಬೇಕೆಂದರೆ ಮಹಿಳೆಯರು ಎಚ್ಚೆತ್ತುಕೊಂಡು ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು ಜಾಗೃತಿ ಮೂಡಿಸಿದಾಗ ಮಹಿಳೆಯರಿಗೆ ಸಮಾಜದಲ್ಲಿ ಸಾಮಾಜಿಕ ಸ್ಥಾನ ಮಾನಗಳು ದೊರಕಲು ಸಾಧ್ಯವಾಗುತ್ತದೆ ಎಂದು ಹೇಳಿದರು.ಕಾರ್ಯಕ್ರಮದ ಮುಖ್ಯ ಅತಿಥಿ–ಯಾಗಿ ಡಾ. ಕಾವ್ಯ ಲಕ್ಷ್ಮೀ ವೈದ್ಯರು ಮಾತನಾಡಿ ಒಬ್ಬ ಮಹಿಳೆಯ ಹಿಂದೆ ಒಬ್ಬ ಪುರುಷನ ಸಹಕಾರ ಇದ್ದರೆ ಸಮಾಜದಲ್ಲಿ ಒಳ್ಳೇಯ ಸ್ಥಾನ ಗಳಿಸಲು ಸಾಧ್ಯವಾಗುತ್ತದೆ. ಹೆಣ್ಣುಮಕ್ಕಳು ಎಂಥಹ ಕಷ್ಟ ಬಂದರು ಶಿಕ್ಷಣ ವನ್ನು ಕುಂಟಿತಗೊಳಿಸದೇ ಉತ್ತಮವಾಗಿ ಅಭ್ಯಾಸ ಮಾಡಿ ಉನ್ನತ ಸ್ಥಾನ ಪಡೆದು ಕೊಳ್ಳಿ ಎಂದು ಹೇಳಿದರು. ಕಾರ್ಯಕ್ರಮದ ಕುರಿತು ಮಂಜುಳಾ ಕಿಶೋರ್ ಕುಮಾರ ಮಾತನಾಡಿದರು. ಹಾಗೂ ಈರಣ್ಣ ಮರ್ಲಟ್ಟಿ ಉಪನ್ಯಾಸಕರು ಮಾತನಾಡಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಡಾ ಹೈಂದವಿ ಮಧುಸೂದನ್ ಗುಪ್ತಾಜಿ ಕಾರ್ಯದರ್ಶಿ ಶಾರದಾ ಶಿಕ್ಷಣ ಸಂಸ್ಥೆಯಯವರು ಮಾತನಾಡಿ ಜೀವನ ಎನ್ನುವುದು ಯಾವ ಸಮಯದಲ್ಲಿ ಹೇಗೆ ಕಷ್ಟ ಬರುತ್ತೆ ಅದನ್ನು ಸ್ವೀಕರಿಸಬೇಕು ಎಂತಹ ಕಷ್ಟಗಳು ಬಂದರು ಹೆದುರಿಸುವ ಧೈರ್ಯ ಇರಬೇಕು ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಉಮಾಮಹೇಶ್ವರಿ ಮದುಸೂಧನ ಗುಪ್ತಾಜಿ ಅಧ್ಯಕ್ಷರು ಶಾರದಾ ಶಿಕ್ಷಣ ಸಂಸ್ಥೆ ಮಾನ್ವಿ, ಜಿ.ಎಸ್ ವರ್ಷಿತಾ,ಉಪಪ್ರಚಾರ್ಯರಾದ ವೀರಭದ್ರಯ್ಯ ಹಿರೇಮಠ ಉಪನ್ಯಾಸಕರು ಹಾಗೂ ಬಿ.ಈಡಿ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಪ್ರಿಯದರ್ಶಿನಿ ಪ್ರಶಿಕ್ಷಣಾರ್ಥಿ ಹಾಗೂ ಬಂಡೆಮ್ಮ ನಿರೂಪಿಸಿದರು. ಲಲಿತಾ ಪ್ರಾರ್ಥನೆ ಗೀತೆಯನ್ನು ಹಾಡಿದರು. ವನಿತಾ ಸ್ವಾಗತಿಸಿದರು. ಅಂಬಿಕಾ ವಂದಿಸಿದರು.

# ಈದ್ ಸೌಹಾರ್ದ ಕೂಟ: ಧರ್ಮಸೌಹಾರ್ದತೆಗೆ ವೇದಿಕೆ ರಮಝಾನ್ ಮೌಲ್ಯಗಳ ಸಂದೇಶ ಹಂಚುವ ಉದ್ದೇಶ




**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಜಮಾಅತೇ ಇಸ್ಲಾಮೀ ಹಿಂದ್ ವತಿಯಿಂದ ಪವಿತ್ರ ಹಬ್ಬದ ಅಂಗವಾಗಿ ಈದ್ ಸೌಹಾರ್ದ ಕೂಟ” ವನ್ನು ದಿನಾಂಕ ಮಾರ್ಚ್ 28 ಶನಿವಾರ ಸಂಜೆ 7:15 ಗಂಟೆಗೆ ಟಿ.ಎ.ಪಿ.ಸಿ.ಎಮ್.ಎಸ್ ಆವರಣದಲ್ಲಿ ಆಯೋಜಿಸಲಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಅಬ್ದುಲ್ ರೆಹಮಾನ್ ಹೇಳಿದರು.**

ರಮಝಾನ್ ತಿಂಗಳ ಪ್ರೀತಿ, ತ್ಯಾಗ, ಸಹನೆ ಮತ್ತು ದಾನಧರ್ಮದ ಮೌಲ್ಯಗಳನ್ನು ಸಮಾಜದ ಎಲ್ಲ ವರ್ಗಗಳೊಂದಿಗೆ ಹಂಚಿಕೊಳ್ಳುವ ಮೂಲಕ ಧರ್ಮ, ಜಾತಿ, ಭಾಷೆ, ಸಂಸ್ಕೃತಿ ಭೇದವಿಲ್ಲದೆ ಪರಸ್ಪರ ಸ್ನೇಹ, ಸೌಹಾರ್ದತೆ ಮತ್ತು ಸಹೋದರತ್ವವನ್ನು ಬಲಪಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು. ಮಾಧ್ಯಮ ಕಾರ್ಯದರ್ಶಿ ಉಮರ್ ದೇವರಮನಿ ಮಾತನಾಡಿ, ಕಾರ್ಯಕ್ರಮದಲ್ಲಿ ಕಲ್ಮಠದ ವಿರುಪಾಕ್ಷ ಪಂಡಿತರಾಧ್ಯ ಮಹಾಸ್ವಾಮಿಗಳು ಹಾಗೂ ಸೇಂಟ್ ಮೇರಿ ಚರ್ಚ್‌ನ ಫಾದರ್ ವಿನ್ಸೆಂಟ್ ಸುರೇಶ್ ಸಾನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಣ್ಣ ನೀರಾವರಿ ಮತ್ತು ತಂತ್ರಜ್ಞಾನ ಸಚಿವ ಎನ್. ಎಸ್. ಬೋಸರಾಜು, ಶಾಸಕ ಹಂಪಯ್ಯ ನಾಯಕ, ಮಾಜಿ ಶಾಸಕರಾದ ರಾಜಾ ವೆಂಕಟಪ್ಪ ನಾಯಕ, ಬಸನಗೌಡ ಬಾಗವಾಟ್, ಗಂಗಾಧರ ನಾಯಕ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.

ಮುಖ್ಯ ಭಾಷಣಕಾರರಾಗಿ ಲಾಲ್ ಹುಸೇನ್ ಕಂದಗಲ್ ಭಗವಸಲಿದ್ದಾರೆ, ಮೌಲಾನಾ ಅನ್ವರ್ ಪಾಶಾ ಉಮ್ರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಗ್ರಾಮೀಣ ಪ್ರದೇಶದಿಂದ ಬರುವ ಜನರಿಗಾಗಿ ಊಟದ ವ್ಯವಸ್ಥೆ ಹಾಗೂ ಮಹಿಳೆಯರಿಗಾಗಿ ಪ್ರತ್ಯೇಕ ಆಸನ ವ್ಯವಸ್ಥೆ ಮಾಡಲಾಗಿದೆ ಎಂದು ವಿವರಿಸಿದರು. ಉಪಾಧ್ಯಕ್ಷ ಎಮ್.ಎ.ಎಚ್. ಮುಖೀಮ್ ಮಾತನಾಡಿ, ಸಾರ್ವಜನಿಕರು ತಮ್ಮ ಕುಟುಂಬದವರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಸೌಹಾರ್ದ ಕೂಟವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಅಬ್ದುಲ್ ಕ–ರೀಮ್ ಖಾನ್, ಅಬ್ದುಲ್ ಗಫೂರ್, ಸೈಯದ್ ಅಕ್ಬರ್ ಪಾಷಾ ಹುಸೇನಿ, ಶೇಖ್ ಬಾಬಾ ಹುಸೇನ್, ಮೊಹಮ್ಮದ್ ಅಬ್ರಾರ್, ಮಿರ್ಜಾ ಬಾಬಾ ಬೇಗ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಬಾಬು ಜಗಜೀವನರಾಂ ಯುವಕ ಸಂಘದಿಂದ ತಹಸಿಲ್ದಾರ್ ಗೆ ಮನವಿ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಪಟ್ಟಣದಲ್ಲಿ ಈಗಾಗಲೇ ಪುರಸಭೆಯಿಂದ ಭಾರತದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಂ ಸಮುದಾಯ ಭವನ ನಿರ್ಮಾಣ–ಕ್ಕೆ ಕಾಯ್ದಿರಿಸಿದ ನಿವೇಶನವನ್ನು ಸಮಾಜ ಕಲ್ಯಾಣ ಇಲಾಖೆಗೆ ಹಸ್ಥಾಂತರಿಸಿ ಭವನ ನಿರ್ಮಾಣ–ಕ್ಕೆ ಅನುಕೂಲ ಮಾಡಿಕೊಡಬೇಕು ಹಾಗೂ 19ನೇ ವಾಡಿನ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಆಗ್ರಹಿಸಿ ಬಾಬು ಜಗಜೀವನ್ ರಾಮ್ ಯುವಕ ಸಂಘ ಹಾಗೂ ಶಿವಶರಣ ಮಾದರ ಚೆನ್ನಯ್ಯ ಸಮಾಜದ ಪದಾಧಿಕಾರಿಗಳು ತಹಸಿಲ್ದಾರ್ ಡಾ.ವಿನಯಾ ಹೂಗಾರ ಅವರಿಗೆ ಗುರುವಾರ ಮನವಿ ಸಲ್ಲಿಸಿದರು.**

ಮನವಿ ಪತ್ರದಲ್ಲಿ ಪಟ್ಟಣದ ಶಿವಶರಣ ಮಾದರ ಚೆನ್ನಯ್ಯ ಸಮಾಜದ ಬಾಂಧವರಿಗೆ ಸಭೆ ಸಮಾರಂಭ ಹಾಗೂ ಸಂಸ್ಕೃತಿಕ ಕಾರ್ಯಕ್ರಮ



ನಡೆಸಲು ಸಮುದಾಯ ಭವನದ ಅಗತ್ಯವಿದ್ದು ಈ ಕುರಿತು ನೀಡಿದ ಮನವಿಗೆ ಪುರಸಭೆಯವರು ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ ನೀಡಲು ಠರಾವು ಮಾಡಿದ್ದು ಆದಷ್ಟು ಬೇಗ ನಿವೇಶನವನ್ನು ಸಮಾಜ ಕಲ್ಯಾಣ ಇಲಾಖೆಗೆ ಪೂರೈಸಬೇಕು ಹಾಗೂ ಪಟ್ಟಣದ ವಾರ್ಡ್ ನಂಬರ್ 19ರಲ್ಲಿ ಮೂಲಸೌಕರ್ಯಗಳ ಕು–ರಿತು ಸಾಕಷ್ಟು ಸಮಸ್ಯೆಗಳಿವೆ ಇಲ್ಲಿ ಶೌಚಾಲಯ ನಿರ್ಮಾಣ ಮಾಡಿದ್ದು ಅದು ಬಳಕೆಯಲ್ಲಿ ಇಲ್ಲ, ಸಮೀಪದಲ್ಲಿಯೇ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಬಡವರಿಗೆ ವಸತಿ ಗೃಹಗಳನ್ನು ನಿರ್ಮಾಣ ಮಾಡುತ್ತಿದ್ದು ಇಲ್ಲಿವರೆಗೆ ಮುಗಿದಿಲ್ಲ ಇದ–ರಿಂದ ಬಡವರಿಗೆ ಸಾಕಷ್ಟು ಅನಾನುಕೂಲ ಆಗುತ್ತಿದೆ.

ಇಲ್ಲಿರುವ ಅಂಗನವಾಡಿ ಕೇಂದ್ರದ ಕೆಲವು ಸಮಸ್ಯೆಗಳಿವೆ ಇವುಗಳನ್ನು ಆದಷ್ಟು ಬೇಗ ಪರಿಹರಿಸದೆ ಹೋದಲ್ಲಿ ನಾವು ಬರಲಿರುವ ಜಯಂತಿ ಕಾರ್ಯಕ್ರಮದಲ್ಲಿ ಸಮಾಜದವರು ಭಾಗವಹಿಸದೆ ಅದನ್ನು ನಿರಾಕರಿಸಿ ಅಂದಿನಿಂದಲೇ ಧರಣಿ ಸತ್ಯಾಗ್ರ ಆರಂಭಿಸುತ್ತೇವೆ ಎಂದು ತಿಳಿಸಲಾಗಿದೆ. ಈ ಸಮಯದಲ್ಲಿ ಸಮಾಜದ ಪ್ರಮುಖರಾದ ಬಸ್ಸು ಮಾದರ, ರಾಮಣ್ಣ ಕಟ್ಟಿಮನಿ, ದೇವೇಂದ್ರ ಹಾದಿಮನಿ, ಗೋಪಾಲ ಕಟ್ಟಿಮನಿ, ಯಮನಪ್ಪ ಕಟ್ಟಿಮನಿ, ಬಾಗಪ್ಪ ಬಿಳೇಬಾವಿ, ದೇವಪ್ಪ ತುಂಬಿಗಿ ಮಹಾದೇವ ಅಸ್ಕಿ, ಕಾಶಿನಾಥ ಕಟ್ಟಿಮನಿ, ಯಮನಪ್ಪ ಹಿರೂರ, ರಮೇಶ ಮಾದರ, ಕಾಳಪ್ಪ ಮಿಣಜ–ಗಿ,ಪರಸಪ್ಪ ತಾಳಿಕೋಟಿ ಮತ್ತಿತರರು ಇದ್ದರು.

# ಶ್ರೀ ಕೋದಂಡರಾಮಸ್ವಾಮಿ ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವ.

**ನೈಜ್ಯ ದೆಸೆ ನ್ಯೂಸ್**

**ಬಾಗೇಪಲ್ಲಿ: ನಾಡಿನ ಜನತೆಗೆ ಒಳ್ಳೆಯದಾಗಲೀ ಎಂಬ ಸದುದ್ದೇಶದೊಂದಿಗೆ ದೇಗುಲ ಮಹೋತ್ಸವ ಕಾರ್ಯಕ್ರಮದಲ್ಲಿ ಕಳೆದ ಮೂರು ದಿನಗಳಿಂದ ವಿಶೇಷ ಪೂಜಾ ಕೈಂಕರ್ಯಗಳನ್ನು ನೇರವೇರಿಸಿ ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತಿದ್ದೇವೆಂದು ಯುವ ಮುಖಂಡ ಎನ್.ಮಂಜುನಾಥ ತಿಳಿಸಿದ್ದಾರೆ.**

ಬಾಗೇಪಲ್ಲಿ ತಾಲೂಕಿನ ಕಸಭಾ ಹೋಬಳಿಯ ತೀಮಾಕಲಪಲ್ಲಿ ಗ್ರಾಮದಲ್ಲಿ ಗ್ರಾಮಸ್ಥರಿಂದ ನಿರ್ಮಿಸಿರುವ ಶ್ರೀ ಸೀತಾ, ರಾಮ, ಲಕ್ಷ್ಮಣ ಹನುಮ ಸಮೇತ ದೇಗುಲ ಲೋಕಾರ್ಪಣೆ



ಹಾಗೂ ಶ್ರೀ ಕೋದಂಡರಾಮಸ್ವಾಮಿ ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ತೀಮಾಕಲಪಲ್ಲಿ ಗ್ರಾಮದಲ್ಲಿ ನಿರ್ಮಿಸಿರುವ ನೂತನ ದೇವಾಲಯ ಹಾಗೂ ದ್ವಜಸ್ತಂಭ ಸ್ಥಾಪನೆ, ಕೋದಂಡರಾಮಸ್ವಾಮಿ ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ಕೆ ಗ್ರಾಮಸ್ಥರು ಸೇ–ರಿದಂತೆ ಹಲವು ಗಣ್ಯರ ಸಹಕಾರ ನೀಡಿದ್ದಾರೆ.

ವಿಗ್ರಹ ಪ್ರತಿಷ್ಠಾಪನ ಕಾರ್ಯಕ್ರಮದ ಅಂಗವಾಗಿ ನಾಡಿನ ಸಮಸ್ತ ಜನತೆಗೆ ಒಳ್ಳೆಯದಾಗಲಿ ಎಂದು ಮೂರು ದಿನಗಳ ಕಾಲ ವಿಶೇಷವಾಗಿ ಪುಣ್ಯವಾಚನ, ನವಗ್ರಹ, ಮೃತ್ಯಂಜಯ, ಬಲಿಹರಣ, ಗೋಪೂಜೆ, ಕೂಷ್ಮಾಂಡ ವೇಧನೆ ಸೇರಿ ವಿಶೇಷ ಹೋಮ, ಪೂಜೆಗಳನ್ನು ನೇರವೇ–ರಿಸಿದ್ದೇವೆ. ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವಕ್ಕೆ ಆಗಮಿಸಿದ್ದ ಎಲ್ಲಾ ಭಕ್ತಾಧಿಗಳಿಗೆ ತೀರ್ಥ ಪ್ರಸಾದ ವಿನಿಯೋಗವನ್ನು ಆಯೋಜಿಸಿದ್ದೇವೆ. ಗ್ರಾಮದ ದೇಗುಲಕ್ಕೆ ಭಕ್ತಾಧಿಗಳು ಒಮ್ಮೆ ಬೇಟಿ ನೀಡಿ ದೇವರ ದರ್ಶನ ಪಡೆದುಕೊಂಡು ಪುನೀತರಾಗಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಪಿ.ಎನ್ ಕೇಶವರೆಡ್ಡಿ ಗ್ರಾಮಸ್ಥರಾದ ಗಣೇಶ್‌ರೆಡ್ಡಿ, ಶಿವಶಂಕರ, ಸುಬ್ಬರಾಯಪ್ಪ, ಚೌಡಪ್ಪ, ಲಕ್ಷಣ, ಟಿಎಂಎಸ್ ಶ್ರೀನಿವಾಸ್, ನಂಜುಂಡಪ್ಪ, ಟಿಬಿಎಲ್ ಶ್ರೀನಿವಾಸ್, ಜಿ.ಎನ್.ಸೀನಪ್ಪ, ಮಧು, ಶೇಖರ್, ವೆಂಕಟರವಣಪ್ಪ, ನಂದೀಶ್, ಎಸ್‌ಎಂಎಲ್ ಶ್ರೀನಿವಾಸ್, ಶ್ರೀನಿವಾಸಲು, ತಲಾರಿ ನಾಗರಾಜು, ನರಸಿಂಹಮೂರ್ತಿ, ನರಸಿಂಹಪ್ಪ ಸೇರಿದಂತೆ ಹಲವಾರು ಮುಖಂಡರು ಭಕ್ತಾದಿಗಳು ಹಾಜರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಬಾಬು ಜಗಜೀವನರಾಂ ಜಯಂತಿ ಅದ್ದೂರಿಯಾಗಿ ಆಚರಿಸೋಣ: ಡಾ.ಹೂಗಾರ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ದೇಶದ ಮಾಜಿ ಉಪ ಪ್ರಧಾನಿ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಂ ಜಯಂತಿಯನ್ನು ಅದ್ದೂರಿಯಾಗಿ ಆಚರಿಸೋಣ ಎಂದು ತಹಸಿಲ್ದಾರ್ ಡಾ.ವಿನಯಾ ಹೂಗಾರ ಹೇಳಿದರು.**

ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಏಪ್ರಿಲ್ 5 ರಂದು ಡಾ.ಬಾಬು ಜಗಜೀವನರಾಂ ಅವರ 119ನೇ ಜಯಂತಿಯನ್ನು ಅದ್ದೂರಿಯಾಗಿ ಆಚ–ರಿಸಲಾಗುತ್ತಿದೆ. ಅಂದು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು ಈಗಿನಿಂದಲೇ ಸಕಲ ಸಿದ್ಧತೆ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಏಪ್ರಿಲ್ 5ರಂದು ಬೆಳಿಗ್ಗೆ 9 ಘಂಟೆಗೆ



ಜಗಜೀವನ್ ರಾಮ್ ಅವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಲಿದ್ದು ಮೆರವಣಿಗೆಯು ತಹಸಿಲ್ದಾರ್ ಕಾರ್ಯಾಲಯದಿಂದ ಆರಂಭವಾಗಿ ಬಸ್ ನಿಲ್ದಾಣ ಮಾರ್ಗ, ಮಹಾರಾಣಾ ಪ್ರತಾಪ್ ಸಿಂಹ ಸರ್ಕಲ್, ಶಿವಾಜಿ ಸರ್ಕಲ್, ಕತ್ರಿ ಬಜಾರ್, ಅಂಬಾ ಭವಾನಿ ದೇವಸ್ಥಾನ ರಸ್ತೆ, ಡಾ. ಅಂಬೇಡ್ಕರ್ ಸರ್ಕಲ್, ಶ್ರೀ ಬಸವೇಶ್ವರ ವೃತ್ತದಿಂದ ಕನ್ನಡ ಶಾಲೆ ಮೈದಾನದವರೆಗೆ ನಡೆಯಲಿದೆ.

ಮೆರವಣಿಗೆಯಲ್ಲಿ ಎಲ್ಲಾ ಸಂಘ ಸಂಸ್ಥೆಗಳ ಮುಖಂಡರು ಸಮಾಜದ ಪ್ರಮುಖರು ಪಟ್ಟಣದ ಗಣ್ಯರು ತಾಲೂಕ ಮಟ್ಟದ ಅಧಿಕಾ–ರಿಗಳು ಮತ್ತು ಸಾರ್ವಜನಿಕರು ಒಳಗೊಂಡು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಿಳಿಸಿದ ಅವರು ಮೆರವಣಿಗೆ ನಂತರ ಬೆಳಿಗ್ಗೆ 11:30ಕ್ಕೆ ಕನ್ನಡ ಶಾಲೆ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು ಇದರಲ್ಲಿ ವಿಶೇಷ ಉಪನ್ಯಾಸ ಹಾಗೂ ಸಮಾಜದ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತಿತರ ಕಾರ್ಯಕ್ರಮಗಳು ನೆರವೇರಲಿವೆ. ಶಿಷ್ಟಾಚಾರದಂತೆ ಆಮಂತ್ರ ಪತ್ರಿಕೆ ಮುದ್ರಣ ಸೇರಿ ಅಗತ್ಯ ಸಿದ್ಧತೆ ಕೈಗೊಳ್ಳುವಂತೆಯೂ ಸದರಿ ಜಯಂತಿ ಕಾರ್ಯಕ್ರಮದಲ್ಲಿ ಎಲ್ಲ ಇಲಾಖೆಯ ಅಧಿಕಾರಿ ಸಿಬ್ಬಂದಿ ಭಾಗವಹಿಸುವಂತೆ ಅವರು ಸೂಚನೆ ನೀಡಿದರು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಬಿ.ಜಿ.ಮಠ ಮಾತನಾಡಿ ಕಾರ್ಯಕ್ರಮದ ಯಶಸ್ವಿಗೆ ಶಕ್ತಿ ಮೀರಿ ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಸಮಾಜದ ಮುಖಂಡರಾದ ಡಿ.ಬಿ.ಹಾದಿಮನಿ, ಬಸ್ಸು ಮಾದರ, ಅಸ್ಕಿ ಮಾದೇವ ಹಾಗೂ ಗೋಪಾಲ ಕಟ್ಟಿಮನಿ ಕಾರ್ಯಕ್ರಮ ಯಶಸ್ವಿಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ಸಭೆಯಲ್ಲಿ ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ. ದಮ್ಮೂರಮಠ, ಪಿಎಸ್‌ಐ ಜ್ಯೋತಿ ಖೋತ, ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ, ಶಿರಸ್ತೆದಾರ ಜೆ.ಆರ್.ಜೈನಾಪೂರ, ಸಮಾಜದ ಪ್ರಮುಖರಾದ ಯಮನಪ್ಪ ಕಟ್ಟಿಮನಿ, ಪರಸಪ್ಪ ತಾಳಿಕೋಟಿ, ಮಹಾದೇವಪ್ಪ ಎಂಟಮಾನ, ಯಮನಪ್ಪ ನಾಯ್ಕೋಡಿ, ಬಸವರಾಜ ತೋಟದ, ದೇವಪ್ಪ ತುಂಬಗಿ, ಭಾಗಣ್ಣ ಮಸ್ಕನಾಳ, ಪರಶುರಾಮ ಕಟ್ಟಿಮನಿ, ರಮೇಶ ಮಾದರ, ಕಾಶಿನಾಥ ಕಟ್ಟಿಮನಿ, ದುರ್ಗೇಶ ವಂದಗನೂರ, ಯಮನಪ್ಪ ಶಿವಪೂರ, ಶೇಕಪ್ಪ ಕಾರಗನೂರ, ಶಿವು ವನಹಳ್ಳಿ,ಅಂಬರೀಶ್ ಪೀರಾಪೂರ, ಮಾನಪ್ಪ ಹಿರೂರ, ಕಾಳಪ್ಪ ಮಿಣಜಗಿ, ಪರಸಪ್ಪ ತಾಳಿಕೋಟಿ

## ಶಿಕ್ಷಣ ಮಾರ್ಗದರ್ಶಿ ವಿಶೇಷ

### B.Tech ಅಗ್ರಿಕಲ್ಚರಲ್ ಇಂಜಿನಿಯರಿಂಗ್

B.Tech ಅಗ್ರಿಕಲ್ಚರಲ್ ಇಂಜಿನಿಯರಿಂಗ್ (Agricultural Engineering) ನಾಲ್ಕು ವರ್ಷಗಳ (8 ಸೆಮಿಸ್ಟರ್) ಪದವಿಪೂರ್ವ ಕೋರ್ಸ್ ಆಗಿದ್ದು, ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನ ಮತ್ತು ಎಂಜಿನಿಯರಿಂಗ್ ತತ್ವಗಳನ್ನು ಬಳಸುವುದರ ಮೇಲೆ ಕೇಂದ್ರೀಕರಿಸುತ್ತದೆ. ಇದು ಮಣ್ಣು ಮತ್ತು ನೀರು ಸಂರಕ್ಷಣೆ, ಕೃಷಿ ಯಂತ್ರೋಪಕರಣಗಳು, ಅಂಗಡಿ ಸುಗ್ಗಿಯ ತಂತ್ರಜ್ಞಾನ ಮತ್ತು ಫುಡ್ ಪ್ರೊಸೆಸಿಂಗ್ ಬಗ್ಗೆ ಕಲಿಸುತ್ತದೆ. ಬಿಟೆಕ್ ಕೃಷಿ ಎಂಜಿನಿಯರಿಂಗ್ ನಾಲ್ಕು ವರ್ಷಗಳ ಅವಧಿಯ ಯುಜಿ ಪದವಿ ಕೋರ್ಸ್ ಆಗಿದ್ದು, ಕೃಷಿ ಮತ್ತು ಕೃಷಿಯೊಂದಿಗೆ ತಂತ್ರಜ್ಞಾನ ಮತ್ತು ಎಂಜಿನಿಯರಿಂಗ್ ಅನ್ವಯಿಕೆಗಳ ಬುದ್ಧಿವಂತ ಏಕೀಕರಣದ ಮೇಲೆ ಬಲವಾಗಿ ಕೇಂದ್ರೀಕರಿಸಿದೆ . ಈ ಕೋರ್ಸ್‌ಗೆ ಪ್ರವೇಶ ಪಡೆಯಲು ಪಿಸಿಎಂ ವಿಷಯಗಳಲ್ಲಿ ಕನಿಷ್ಠ 50 ರಿಂದ 60% ಅಂಕಗಳೊಂದಿಗೆ ವಿಜ್ಞಾನ ವಿಭಾಗದಲ್ಲಿ 12 ನೇ ತರಗತಿ ಕಡ್ಡಾಯವಾಗಿದೆ. ಭಾರತದಲ್ಲಿ 300 ಕ್ಕೂ ಹೆಚ್ಚು ಎಂಜಿನಿಯರಿಂಗ್ ಕಾಲೇಜುಗಳು ಬಿ ಟೆಕ್ ಕೃಷಿ ಎಂಜಿನಿಯರಿಂಗ್ ಕೋರ್ಸ್ ಅನ್ನು ನೀಡುತ್ತವೆ, ಅವುಗಳಲ್ಲಿ ಐಐಟಿ ಖರಗ್‌ಪುರ, ಐಐಟಿ ರೋಪರ್, ಕಲಾಸಲಿಂಗಂ ಅಕಾಡೆಮಿ, ಸಿಮ್ಯಾಟ್ಸ್, ವಿಜ್ಞಾನ್ ಫೌಂಡೇಶನ್, ಡಿಇಐ, ಇತ್ಯಾದಿ. ಸರಾಸರಿ ಬಿ.ಟೆಕ್ ಕೃಷಿ ಎಂಜಿನಿಯರಿಂಗ್ ಕೋರ್ಸ್ ಶುಲ್ಕ INR 7,200 ರಿಂದ INR 10.4 ಲಕ್ಷದವರೆಗೆ ಇರುತ್ತದೆ. ಬಿ ಟೆಕ್ ಕೃಷಿ ಪದವೀಧರರು ಕೃಷಿ ಮತ್ತು ಕೃಷಿ ಎಂಜಿನಿಯರ್, ಕೃಷಿ ಸಲಕರಣೆ ಎಂಜಿನಿಯರ್, ಸಂಶೋಧನೆ ಮತ್ತು ಅಭಿವೃದ್ಧಿ ವಿಜ್ಞಾನಿ, ಆಹಾರ ಉತ್ಪಾದನಾ ಎಂಜಿನಿಯರ್, ಕೃಷಿ ಅರ್ಥಶಾಸ್ತ್ರಜ್ಞ ಮುಂತಾದ ಪ್ರೊಫೈಲ್‌ಗಳಲ್ಲಿ ಉದ್ಯೋಗಾವಕಾಶಗಳನ್ನು ಅನ್ವೇಷಿಸಬಹುದು, ಆರಂಭಿಕ ವೇತನ ಸುಮಾರು ಪ್ರಮುಖ ವಿವರಗಳು: ಅರ್ಹತೆ: ಪಿಯುಸಿ/12ನೇ ತರಗತಿಯಲ್ಲಿ ಪಿಸಿಎಂ (Physics, Chemistry, Maths) ಅಥವಾ ಪಿಸಿಎಂಬಿ (PCMB) ವಿಷಯಗಳೊಂದಿಗೆ ಕನಿಷ್ಠ 50% ಅಂಕ. ಪ್ರವೇಶ ಪರೀಕ್ಷೆ: ಕೆಸಿಇಟಿ (KCET), ಜೆಇಇ ಮೇನ್ (JEE Main), ಅಥವಾ ಐಸಿಎಆರ್ (ICAR) ಪರೀಕ್ಷೆಗಳು. ಕರ್ನಾಟಕದ ಪ್ರಮುಖ ಕಾಲೇಜುಗಳು: ರಾಯಚೂರಿನ ಕೃಷಿ ಇಂಜಿನಿಯರಿಂಗ್ ಕಾಲೇಜು (UAS Raichur), ಬೆಂಗಳೂರು (GKVK). ಕೋರ್ಸ್ ವಿಷಯಗಳು: ಕೃಷಿ ಯಂತ್ರೋಪಕರಣಗಳು, ಮಣ್ಣು ಮತ್ತು ನೀರು ಇಂಜಿನಿಯರಿಂಗ್, ಸಂಸ್ಕರಣೆ ಮತ್ತು ಆಹಾರ ಇಂಜಿನಿಯರಿಂಗ್, ನವೀಕರಿಸಬಹುದಾದ ಇಂಧನ ಮೂಲಗಳು.ಉದ್ಯೋಗಾವಕಾಶಗಳು: ಕೃಷಿ ಅಧಿಕಾರಿ, ಫಾರ್ಮ್ ಮ್ಯಾನೇಜರ್, ಸಂಶೋಧಕ, ಟ್ರ್ಯಾಕ್ಟರ್ ಕಂಪನಿ ಇಂಜಿನಿಯರ್, ಫುಡ್ ಪ್ರೊಸೆಸಿಂಗ್ ಉದ್ಯಮ. ಕಲಿಯುವ ಮುಖ್ಯ ವಿಷಯಗಳು: ಫಾರ್ಮ್ ಮೆಷಿನರಿ ಮತ್ತು ಪವರ್: ಟ್ರ್ಯಾಕ್ಟರ್ ಮತ್ತು ಇತರ ಯಂತ್ರಗಳ ವಿನ್ಯಾಸ. ಮಣ್ಣು ಮತ್ತು ನೀರು ಸಂರಕ್ಷಣೆ: ನೀರಾವರಿ ಮತ್ತು ಒಳಚರಂಡಿ ತಂತ್ರಜ್ಞಾನ. ಅಂಗಡಿ ಸುಗ್ಗಿಯ ತಂತ್ರಜ್ಞಾನ: ಬೆಳೆ ಕಟಾವಿನ ನಂತರದ ಸಂಸ್ಕರಣೆ. ಕೃಷಿ ರಚನೆಗಳು: ಹಸಿರುಮನೆ (Greenhouse) ಮತ್ತು ಉಗ್ರಾಣಗಳ ನಿರ್ಮಾಣ. ಈ ಕೋರ್ಸ್ ಕೃಷಿ ಯಾಂತ್ರೀಕರಣದ ಮೂಲಕ ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ರೈತರ ಕೆಲಸವನ್ನು ಸುಲಭಗೊಳಿಸಲು ಸಹಾಯ ಮಾಡುತ್ತದೆ.

1ನೇ ಪುಟದಿಂದ....

ಕೈಗೊಂಡಿರುವುದರಿಂದ ಈ ಬಾರಿ ಪಂದ್ಯ ಸುಸೂತ್ರವಾಗಿ ನಡೆಯಲಿದೆ ಎಂದು ಅವರು ಇದೇ ಸಂದರ್ಭದಲ್ಲಿ ವಿಶ್ವಾಸ ವ್ಯಕ್ತಪಡಿಸಿದರು. ಈ ಬಾರಿ ಹೋಲ್ಡಿಂಗ್ ಏರಿಯಾದ ಮೇಲೆ ಹೆಚ್ಚು ಗಮನಹರಿಸಿದ್ದೇವೆ. ಅಲ್ಲಿ 2 ಸಾವಿರಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗಾಗಿ ನಿಯೋಜನೆ ಮಾಡಿಕೊಂಡಿದ್ದೇವೆ. ಎಕ್ ಸಪರ್ಟ್ ಕಮಿಟಿ ಸಲಹೆ ಪ್ರಕಾರ ಎಲ್ಲಾ ಕ್ರಮ ಕೈಗೊಂಡಿದ್ದೇವೆ. ನಮ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿದ್ದಾರೆ. ಈ ಬಾರಿ 9 ಆಯಂಬುಲೆನ್?ಸ ನಿಯೋಜನೆ ಮಾಡಿದ್ದೇವೆ. ಮೈದಾನದ ಒಳಗೆ ಐದು ಹಾಗೂ ಹೊರಗೆ ನಾಲ್ಕು ಆಯಂಬುಲೆನ್ ಸಗಳನ್ನು ನಿಯೋಜನೆ ಮಾಡಿದ್ದೇವೆ ಎಂದು ಅವರು ಮಾಹಿತಿ ನೀಡಿದರು. ಜನಸಂಖ್ಯೆ ನಿಯಂತ್ರಣಕ್ಕೆ ಕ್ರಮ: ಈ ಬಾರಿ ನಾವು ಜನದಟ್ಟಣೆ ನಿಯಂತ್ರಣ ಮಾಡಲು ಆದ್ಯತೆ ನೀಡಿದ್ದೇವೆ. ಟಿಕೆಟ್ ಇಲ್ಲದವರು ಮೈದಾನದ ಹೊರಗೆ ಸುತ್ತಾಡಲು ಅವಕಾಶ ನೀಡುವುದಿಲ್ಲ. ಪಂದ್ಯ ವೀಕ್ಷಿಸಲು ಆಗಮಿಸುವ ಪ್ರೇಕ್ಷಕರಿಗೆ ಉಚಿತ ಮೆಟ್ರೋ ಟಿಕೆಟ್ ಹಾಗೂ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಪಂದ್ಯ ಮುಗಿದ ನಂತರವೂ ಮೆಟ್ರೋ ಸಂಚಾರ ಮಾಡುವುದರಿಂದ ಪ್ರೇಕ್ಷಕರು ಮೆಟ್ರೋ ಬಳಕೆ ಮಾಡುವ ಮೂಲಕ ವಾಹನ ದಟ್ಟಣೆ ಹೆಚ್ಚಾಗದಂತೆ ನೋಡಿಕೊಳ್ಳಲು ಸಹಕರಿಸಬೇಕು ಎಂದು ಆಯುಕ್ತರು ಮನವಿ ಮಾಡಿಕೊಂಡರು. 2 ವಿಭಾಗಗಳಲ್ಲಿ ಪೊಲೀಸರ ನಿಯೋಜನೆ: ಚಿನ್ನಸ್ವಾಮಿ ಮೈದಾನಕ್ಕೆ ನಾವು ಎಂ 1 ಹಾಗೂ ಎಂ 2 ವಿಭಾಗಗಳನ್ನಾಗಿ ವಿಂಗಡಿಸಿ ಪೊಲೀಸರನ್ನು ನಿಯೋಜನೆ ಮಾಡಿದ್ದೇವೆ. ಮೈದಾನದ ಒಳಭಾಗದಲ್ಲೂ ನಾವು ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಿದ್ದೇವೆ. 15 ರಿಂದ 21 ಸ್ಕ್ವಾಡ್ಗಳನ್ನು ಮಾಡಲಾಗಿದ್ದು ನಗರದ ಬಹುತೇಕ ಠಾಣೆಗಳ ಪೊಲೀಸರನ್ನು ಭದ್ರತಾ ಕಾರ್ಯಕ್ಕೆ ನಿಯೋಜನೆ ಮಾಡಿಕೊಂಡಿದ್ದೇವೆ ಎಂದು ಸೀಮಂತ್ಕುಮಾರ್ ಸಿಂಗ್ ವಿವರಣೆ ನೀಡಿದರು.

# ಆರೋಗ್ಯ ಇಲಾಖೆಯೊಂದಿಗೆ ಸಮುದಾಯ ಹಾಗೂ ಇಲಾಖೆಗಳು ಕ್ಷಯರೋಗ ನಿರ್ಮೂಲನೆ ಕೈಜೊಡಿಸೋಣ: ಹೆಚ್ಚುವರಿ ಪೋಲಿಸ್ ಅಧಿಕ್ಷಕರು

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸಾವಿರಾರೂ ವರ್ಷಗಳಿಂದ ಸಮಾಜದಲ್ಲಿ ಮನೆ ಮಾಡಿರುವ ಸಾಂಕ್ರಾಮಿಕ ಖಾಯಿಲೆ ಕ್ಷಯರೋಗವನ್ನು ನಿರ್ಮೂಲನೆ ಮಾಡಲು ಆರೋಗ್ಯ ಇಲಾಖೆಯೊಂದಿಗೆ ವಿವಿಧ ಇಲಾಖೆಗಳು ಹಾಗೂ ಸಮುದಾಯವು ಕೈಜೊಡಿಸಬೇಕಿದೆ ಎಂದು ಹೆಚ್ಚುವರಿ ಪೋಲಿಸ್ ಅಧಿಕ್ಷಕರು ಎಸ್ ಜಿ ಕುಮಾರಸ್ವಾಮಿ ತಿಳಿಸಿದರು.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ, ರಿಮ್ಸ್ ಮೆಡಿಕಲ್ ಕಾಲೇಜ್, ನವೋದಯ ಮೆಡಿಕಲ್ ಕಾಲೇಜ್, ರಿಮ್ಸ್ ನರ್ಸಿಂಗ್ ಕಾಲೇಜ್, ಪೋಲಿಸ್ ಇಲಾಖೆ, ಮಹಾನಗರ ಪಾಲಿಕೆ ಜಿಲ್ಲಾ ತರಬೇತಿ ಕೇಂದ್ರ, ಹಾಗೂ ವಿವಿಧ ಸಂಘಟನೆಗಳ ಆಶ್ರಯದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿ ಜಾಗೃತಿ ಜಾಥಾ ಚಾಲನೆಗೊಳಿಸಿ ಮಾತನಾಡುತ್ತಾ, ವರ್ಷ ವೈದ್ಯಕೀಯ ಪರಿಭಾಷೆಯಲ್ಲಿ ಹೇಳುವಂತೆ ಎರಡು ವಾರಕ್ಕಿಂತ ಹೆಚ್ಚು ದಿನಗಳ ಕೆಮ್ಮು ಇದ್ದಲ್ಲಿ ಯಾರು ನಿರ್ಲಕ್ಷ್ಯ ಮಾಡಬೇಡಿ, ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕೆಮ್ಮುವ, ಉಗುಳುವ, ರೂಡಿಗಳನ್ನು ನಿಯಂತ್ರಣ ಮಾಡಿದಲ್ಲಿ ಹಾಗೂ



ಆರೋಗ್ಯಇಲಾಖೆಯ ಕಾರ್ಯ ಚಟುವಟಿಕೆಗಳಿಗೆ ಬೆಂಬಲವಾಗಿ ಇದ್ದಲ್ಲಿ ಕ್ಷಯರೋಗ ನಿರ್ಮೂಲನೆ ಸಾಧ್ಯವಿದೆ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ ಸುರೇಂದ್ರ ಬಾಬು ಮಾತನಾಡಿ ಜಗತ್ತಿನ ಒಟ್ಟು ಪ್ರಕರಣಗಳಲ್ಲಿ ಶೇಕಡ 25 ರಷ್ಟು ಭಾರತದಲ್ಲಿ ಪ್ರಕರಣಗಳಿವೆ. ಪ್ರಸಕ್ತ ವರ್ಷ "ಹೌದು, ಭಾರತದ ನೇತೃತ್ವದಲ್ಲಿ, ಜನರ ಶಕ್ತಿಯೊಂದಿಗೆ ನಾವು ಕ್ಷಯರೋಗವನ್ನು ನಿರ್ಮೂಲನೆ ಮಾಡಬಹುದು" ಎಂಬ ಘೋಷ ವಾಕ್ಯದಡಿ ಜನ ಸಮುದಾಯಕ್ಕೆ ನಿರಂತರ ಜಾಗೃತಿಯೊಂದಿಗೆ ಕ್ಷಯರೋಗದ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತಿದ್ದೆವೆ. ಈಗಾಗಲೆ ರಾಷ್ಟ್ರೀಯ ಮಾರ್ಗಸೂಚಿಯನ್ವಯ ಜಿಲ್ಲೆಯ 18 ಗ್ರಾಮ ಪಂಚಾಯತಗಳು ಕ್ಷಯ ಮುಕ್ತ ಗ್ರಾಮಪಂಚಾಯತ ಪ್ರಶಸ್ತಿಗೆ ಭಾಜನರಾಗಿವೆ.

ಕ್ಷಯರೋಗ ಪತ್ತೆಗಾಗಿ ಕಫ ಪರೀಕ್ಷೆ, ಸಿಬಿ ನ್ಯಾಟ್, ಟ್ರ್ಯೂನಾಟ್ ಮೂಲಕ ಆಸ್ಪತ್ರೆಗಳಲ್ಲಿ ಹಾಗೂ ಇತ್ತೀಚಿಗೆ ಸಮುದಾಯದಲ್ಲಿ ಸ್ಥಳದಲ್ಲಿಯೇ ಹ್ಯಾಂಡ್‌ಹೆಲ್ಡ್ ಎಕ್ಸ್‌ರೇ ಮೆಷಿನ್ ಮೂಲಕ ರೋಗ ಪತ್ತೆ ಮಾಡಲಾಗುವುದು. ಕ್ಷಯರೋಗಕ್ಕೆ ಚಿಕಿತ್ಸೆ ಪಡೆಯುವವರೊಂದಿಗೆ ಅವರ ಕುಟುಂಬದ ಸದಸ್ಯರ ತಪ್ಪದೆ ಕಫ ಪರೀಕ್ಷೆ ಮಾಡಿಸಲು ಮರೆಯಬಾರದು ಎಂದರು. ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ ಮಹಮ್ಮದ್ ಶಾಕೀರ್ ಮೊಹಿನುದ್ದೀನ್ ಪ್ರಸ್ತಾವಿಕವಾಗಿ ಮಾತನಾಡಿದರು. ನವೋದಯ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳಿಂದ ಕಿರು ನಾಟಕ ಜಾಥಾ ವಿವಿಧ ರಸ್ತೆಗಳಲ್ಲಿ ಸಂಚರಿಸಿದ ನಂತರ ತೀನ್‌ಕಂದಿಲ್ ಚೌಕ್ ಹತ್ತಿರ ಕ್ಷಯರೋಗ ಜಾಗೃತಿಯ ಕುರಿತು ವೈದ್ಯ ವಿಧ್ಯಾರ್ಥಿಗಳಿಂದ ಬೀದಿ ನಾಟಕ ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ರಿಮ್ಸ್ ಆಸ್ಪತ್ರೆ ಡಾ ವಿಜಯಶಂಕರ,

ರಿಮ್ಸ್ ಪ್ರಾಂಶುಪಾಲರಾದ ಡಾ ರಾಹುಲ್ ಕೀರ್ತೆ, ಡಾ ರಂಜನ್ ಮುಖ್ಯಸ್ಥರು ಸಮುದಾಯ ವೈದ್ಯಕೀಯ ವಿಭಾಗ, ಪ್ರಾಧ್ಯಾಪಕರು ಡಾ ಚಂದ್ರಶೇಖರ್, ಡಿಎಸ್‌ಓ ಡಾ ಗಣೇಶ ಕೆ, ಟಿಹೆಚ್‌ಓ ಅಮೃತ್ ಹುಕ್ಕೇರಿ, ನವೋದಯ ವೈದ್ಯಕೀಯ ಮಹಾವಿದ್ಯಾಲಯದ ಪಿಎಸ್‌ಎಮ್ ವಿಭಾಗದ ಡಾ ಆರ್ಶಿಯಾ, ಡಾ ಸುಜಾತಾ, ಡಾ ರೂಪಕಲಾ, ಡಾ ಪ್ರತಿಭಾ, ರಿಮ್ಸ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಅರ್ಚನಾ, ಶಿವರಾಜ, ಡಿಹೆಚ್‌ಇಓ ಈಶ್ವರ ಹೆಚ್ ದಾಸಪ್ಪನವರ, ಡಿಪಿಸಿ ಅಮರೇಶ ಕುಮಾರ, ಡಿಪಿಪಿಎಮ್‌ಸಿ ಮೊಹೀನ್ ಪಾಶಾ, ಏಡ್ಸ್ ಮೇಲ್ವಿಚಾರಕ ಮಲ್ಲಯ್ಯ ಮಠಪತಿ ಸೇರಿದಂತೆ ವೈದ್ಯಕೀಯ, ನರ್ಸಿಂಗ್ ವಿದ್ಯಾರ್ಥಿಗಳು, ಎಸ್‌ಟಿಎಸ್, ಎಸ್‌ಎಲ್‌ಎಸ್, ಟಿಬಿ ವಿಭಾಗ, ಏಡ್ಸ್ ವಿಭಾಗದ ಹಾಗೂ ಪೋಲಿಸ್ ಸಿಬ್ಬಂದಿಯರು ಹಾಜರಿದ್ದರು.

# ಎಲ್ಲ ಅಧಿಕಾರಿಗಳೂ ಮಾನವ ಹಕ್ಕುಗಳ ಸಂರಕ್ಷಣಾಧಿಕಾರಿಗಳು: ಡಾ.ಟಿ.ಶ್ಯಾಮ್ ಭಟ್



❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಪ್ರತಿಯೊಂದು ಇಲಾಖೆಯ ಅಧಿಕಾರಿಗಳು ಮಾನವ ಹಕ್ಕುಗಳ ಸಂರಕ್ಷಾಣಧಿಕಾರಿಗಳು. ಕಚೇರಿಗಳಿಗೆ ಯಾರೇ ದೂರು ಹೊತ್ತು ಬರಲಿ ಅವರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಡಾ.ಟಿ.ಶ್ಯಾಮ್ ಭಟ್ ಅವರು ಸಲಹೆ ಮಾಡಿದರು.**

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಾರ್ಚ 26ರಂದು ನಡೆದ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಕರಣಗಳ ವಿಲೇವಾರಿ ಹಾಗೂ ಸಾರ್ವಜನಿಕ ಅಹವಾಲು ಸ್ವೀಕಾರ ಮತ್ತು ದೂರುಗಳ ವಿಚಾರಣೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ ಮಾರ್ಚ 25ರಂದು ರಾಯಚೂರು ನಗರದಲ್ಲಿ ವಸತಿ ನಿಲಯ, ಬಸ್ ನಿಲ್ದಾಣ, ಕಾರಾಗೃಹ ಸೇರಿದಂತೆ ವಿವಿಧೆಡೆ ಭೇಟಿ ನಡೆಸಿ ಆಯಾ ಕಡೆಗಳಲ್ಲಿನ ವಾಸ್ತವ ಪರಿಸ್ಥಿತಿಯನ್ನು ಅವಲೋಕಿಸಲಾಗಿದೆ.

ವಿದ್ಯಾರ್ಥಿನಿಯರು ವಸತಿ ನಿಲಯದ ಇಕ್ಕಟ್ಟಾದ ಕೋಣೆಯಲ್ಲಿ ವಾಸ್ತವ್ಯ ಮಾಡುತ್ತಿರುವುದು ಕಂಡು ಬಂದಿದೆ. ವಿದ್ಯಾರ್ಥಿಗಳ ಸಂಖ್ಯೆಗೆ ತಕ್ಕಂತೆ ಕಟ್ಟಡದ ವ್ಯವಸ್ಥೆಗೆ ಕ್ರಮವಹಿಸಬೇಕು ಎಂದು ಅವರು ಸೂಚನೆ ನೀಡಿದರು. ಬಸ್ ನಿಲ್ದಾಣದ ಭೇಟಿ ವೇಳೆ ಕೆಲ ಕಡೆ ಅಶುಚಿತ್ವ ಕಂಡು ಬಂದಿದೆ. ಇದು ಕೂಡಲೇ ಸರಿಯಾಗಬೇಕು. ರಾಯಚೂರು-ಮಾನವಿ ಮಧ್ಯೆ ಅಡ್ಡಾಡುವ ಬಸ್ಸಗಳು ಪ್ರಮುಖ ಹಳ್ಳಗಳಲ್ಲಿ ನಿಲುಗಡೆಯಾಗಬೇಕು. ರಾಯಚೂರು-ಲಿಂಗಸೂರು ಮಧ್ಯೆ ಹೆಚ್ಚಿನ ಸಂಖ್ಯೆಯಲ್ಲಿ ಬಸ್ ಓಡಿಸಬೇಕು ಎನ್ನುವ ಸಾರ್ವಜನಿಕರ ಮನವಿಗೆ ಸ್ಪಂದನೆ ಸಿಗಬೇಕು ಎಂದು ಇದೆ ವೇಳೆ ಅಧ್ಯಕ್ಷರು ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಬಸ್ ನಿಲ್ದಾಣದ ಆವರಣದಲ್ಲಿರುವ ಅಂಗಡಿಗಳು ಪ್ರಯಾಣಿಕರನ್ನು ಸುಲಿಯಬಾರದು. ಹೆಚ್ಚಿನ ಬೆಲೆ ನಿಗದಿಪಡಿಸಬಾರದು. ಅವಧಿ ಮುಗಿದ ಆಹಾರ ಪದಾರ್ಥ ಸೇರಿದಂತೆ ಯಾವುದೇ ವಸ್ತುಗಳನ್ನು ಮಾರಾಟ ಮಾಡಬಾರದು.

ಈ ಬಗ್ಗೆ ಸಾರಿಗೆ ಅಧಿಕಾರಿಗಳು ಬಸ್ ನಿಲ್ದಾಣದ ಆವರಣದಲ್ಲಿರುವ ಅಂಗಡಿಗಳ ಮಾಲೀಕರಿಗೆ ಸುತ್ತೋಲೆ ಹೊರಡಿಸಿ ನಿರ್ದೇಶನ ನೀಡಬೇಕು ಎಂದು ಸೂಚನೆ ನೀಡಿದರು. ಇದೆ ವೇಳೆ, ಆಯೋಗದ ನ್ಯಾಯಿಕ ಸದಸ್ಯರಾದ ಎಸ್.ಕೆ ವಂಟಿಗೋಡಿ ಅವರು ಮಾತನಾಡಿ, ವ್ಯಕ್ತಿಯೊಬ್ಬ ಸಂತೋಷದಿಂದ ಬಾಳಲು ಬೇಕಾದ ಮೂಲಭೂತ ಹಕ್ಕುಗಳೇ ಮಾನವ ಹಕ್ಕುಗಳು. ವ್ಯಕ್ತಿಯ ಜನ್ಮತಃದಿಂದ ಬರುವ ಹಕ್ಕುಗಳೇ ಮಾನವ ಹಕ್ಕುಗಳ ಎಂದು ತಿಳಿಯಬೇಕು. ಜನಿಸಿದ ಪ್ರತಿಯೊಬ್ಬರಿಗೂ ಸಮಾಜದಲ್ಲಿ ಸಮಾನ ಅವಕಾಶ ಪಡೆದು ಬದುಕುವ ಹಕ್ಕಿದೆ. ಯಾರು ಸಹ ಶೋಷಣೆಗೆ ಒಳಗಾಗಬಾರದು. ಮೂಲಭೂತ ಸೌಕರ್ಯಗಳಿಂದ ವಂಚಿತರಾಗಬಾರದು.

ಉದ್ಯೋಗವಕಾಶ ಸೇರಿದಂತೆ ಸ್ವತಂತ್ರವಾಗಿ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶವು ಪ್ರತಿಯೊಬ್ಬರಿಗೂ ಸಂವಿಧಾನ ಬದ್ಧವಾಗಿ ಬಂದಿದೆ. ಜಮೀನಿಗೆ ಹದ್ದು ಬಸ್ತು ಮಾಡಬೇಕು. ಖಾತಾ ನೀಡಬೇಕು ಎನ್ನುವಂತಹ ಸಾರ್ವಜನಿಕರ ಅನೇಕ ಮನವಿಗಳಿಗೆ ಸ್ಪಂದನೆ ನೀಡದೇ ಇದ್ದರೆ ಅದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ವಸತಿ ನಿಲಯದ ಮಕ್ಕಳು ಸಮರ್ಪಕ ಗಾಳಿ, ಬೆಳಕು, ಶುಚಿಯಾದ ಆಹಾರ, ಶುದ್ಧ ನೀರು ಸಿಗದೇ ವಂಚಿತರಾದರೆ ಅದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಯಾರೋ ಒಬ್ಬರು ಅನಿಷ್ಠ ಪದ್ಧತಿ ಪಾಲನೆ ಮಾಡುವುದರಿಂದಾಗಿ ಇನ್ನೊಬ್ಬರಿಗೆ ಅನ್ಯಾಯವಾದರೆ ಅದು ಸಹ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಅಧಿಕಾರಿಗಳು ಇಂತಹ ಸೂಕ್ಷ್ಮ ವಿಷಯಗಳನ್ನು ಅರಿಯಬೇಕು.

ಯಾವುದೇ ವಿಷಯದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಯಾವುದೇ ಕಡೆಗೆ ಯಾವುದೇ ವಿಷಯದಲ್ಲಿ ಮಾನವ ಹಕ್ಕುಗಳು ಉಲ್ಲಂಘನೆಯಾಗಿರುವುದು ಕಂಡು ಬಂದಲ್ಲಿ ಅದಕ್ಕೆ ಅಧಿಕಾರಿಗಳನ್ನೇ ನೇರ ಹೊಣೆಯಾಗಿಸಿ ಕ್ರಮ ಜರುಗಿಸುವುದಾಗಿ ಅವರು ಎಚ್ಚರಿಕೆ ನೀಡಿದರು. ನಿಮ್ಮ ನಿಮ್ಮ ಕಚೇರಿಗಳಿಗೆ ಯಾರೇ ಬರಲಿ, ಯಾವುದೇ ದೂರನ್ನು ತರಲಿ ಆ ಅಹವಾಲುದಾರರೊಂದಿಗೆ ಸಾವಧಾನದಿಂದ, ಸೌಜನ್ಯದಿಂದ ವರ್ತಿಸಬೇಕು.

ಅವರೊಂದಿಗೆ ಮಾನವೀಯತೆಯಿಂದ ನಡೆದುಕೊಳ್ಳಬೇಕು ಎಂದು ಅವರು ಸಲಹೆ ಮಾಡಿದರು. ಜಿಲ್ಲಾಧಿಕಾರಿಗಳ ಕಾರ್ಯವೈಖರಿಗೆ ಮೆಚ್ಚುಗೆ: ರಾಯಚೂರು ಜಿಲ್ಲೆಯು ಸಹ ಇನ್ನು ಬದಲಾಗಬೇಕು; ಅಭಿವೃದ್ಧಿಯಾಗಬೇಕು. ಇಲ್ಲಿಗೆ ಬರುವ ಅಧಿಕಾರಿಗಳು ಉತ್ತಮವಾಗಿ ಕೆಲಸ ಮಾಡಿ ಜಿಲ್ಲೆಯ ಅಭಿವೃದ್ಧಿಗೆ ಕೊಡುಗೆ ನೀಡಬೇಕು ಎಂದು ಸಲಹೆ ಮಾಡಿದ ವಂಟಿಗೋಡಿ ಅವರು, ರಾಯಚೂರು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ದಕ್ಷ ಅಧಿಕಾರಿಗಳಾಗಿದ್ದು, ಜನಕಾಳಜಿ ಹೊಂದಿದ ಜಿಲ್ಲಾಧಿಕಾರಿಗಳನ್ನು ಪಡೆದ ರಾಯಚೂರು ಜಿಲ್ಲೆಯ ಜನರು ಭಾಗ್ಯಶಾಲಿಗಳು ಎಂದು ಜಿಲ್ಲಾಧಿಕಾರಿಗಳ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಸಿಇಓ ಈಶ್ವರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಸಹಾಯಕ ಆಯುಕ್ತರಾದ ಬಸವಣೆಪ್ಪ ಕಲಶೆಟ್ಟಿ, ಡಾ.ಹಂಪಣ್ಣ ಸಜ್ಜನ್ ಸೇರಿದಂತೆ ವಿವಿಧ ತಾಲೂಕಿನ ತಹಸೀಲ್ದಾರರು, ತಾಪಂ ಕಾರ್ಯನಿರ್ವಹಣಾಧಿಕಾರಿಗಳು, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಇದ್ದರು.

# ವಿವಿಧೆಡೆ ಲೋಪ: ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ ರಾಯಚೂರು ಜಿಲ್ಲೆಯಲ್ಲಿ 32 ಸುಮೊಟು ಕೇಸ್ ದಾಖಲು

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಜಿಲ್ಲೆಯಲ್ಲಿ ವಿವಿಧ ಪತ್ರಿಕೆಗಳು ಪ್ರಕಟಿಸಿದ ಕುಂದುಕೊರತೆಗಳ ವಿಶೇಷ ವರದಿಗಳನ್ನು ದಾಖಲೆಯಾಗಿರಿಸಿಕೊಂಡು ಸಾರ್ವಜನಿಕ ಹಿತಾಸಕ್ತಿಯಿಂದ ಒಟ್ಟು 32 ಸುಮೊಟು ಕೇಸಗಳನ್ನು ದಾಖಲಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಡಾ.ಟಿ.ಶ್ಯಾಮ್ ಭಟ್ ಅವರು ತಿಳಿಸಿದರು.**

ಮಾರ್ಚ 25ರಿಂದ ರಾಯಚೂರು ಪ್ರವಾಸದಲ್ಲಿರುವ ಅವರು, ಮಾರ್ಚ 26ರಂದು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ಹಾಗೂ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಬಳಿಕ ಅವರು ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.



ಮಾರ್ಚ 26ರಂದು ನಡೆದ ವಿಚಾರಣೆಯಲ್ಲಿ 32 ಸುಮೊಟು ಕೇಸಗಳು ಹಾಗೂ ಬೇರೆಡೆಯಿಂದ ಆಯೋಗದಲ್ಲಿ ದಾಖಲಾದ 27 ದೂರುಗಳು ಸೇರಿದಂತೆ ಒಟ್ಟು 59 ಪ್ರಕರಣಗಳ ಬಗ್ಗೆ ವಿಚಾರಣೆ ನಡೆಸಿದ್ದೇವೆ. ಕೆಲವು ಪ್ರಕರಣಗಳ ಬಗ್ಗೆ ಅಧಿಕಾರಿಗಳಿಂದ ವರದಿ ಕೇಳಿದ್ದೇವೆ ಎಂದು ತಿಳಿಸಿದರು.

ಮಾರ್ಚ 25ರಂದು ರಾಯಚೂರು ಸಿಟಿಯ ವಿವಿಧೆಡೆ ಭೇಟಿ ನೀಡಿದ್ದೇವೆ. ಆಸ್ಪತ್ರೆಗಳ ಸ್ಥಿತಿಯನ್ನು ಖುದ್ದು ಅವಲೋಕಿಸಿದ್ದೇವೆ. ಪೊಲೀಸ್ ಠಾಣೆಗಳಲ್ಲಿನ ಕ್ರೈಮ್ ಪ್ರಕರಣಗಳ ವಿವರ ಪಡೆದಿದ್ದೇವೆ. ಈ ಬಗ್ಗೆ ಸಭೆಯಲ್ಲಿ ಅಧಿಕಾರಿಗಳಿಂದ ವಿವರಣೆ ಕೇಳಿದ್ದೇವೆ ಎಂದು ತಿಳಿಸಿದರು. ಮಾನವ ಹಕ್ಕುಗಳ ಆಯೋಗದಲ್ಲಿ 2022ರಿಂದ 8000 ಕೇಸಗಳಿದ್ದು, ಇವುಗಳ ವಿಚಾರಣೆ ನಡೆಸಿ ಬಹುತೇಕ ಪ್ರಕರಣಗಳನ್ನು ಇತ್ಯರ್ಥ ಪಡಿಸಿದ್ದೇವೆ. ಇನ್ನು 3600 ಪ್ರಕರಣಗಳು ಬಾಕಿ ಇವೆ. ಆಯೋಗದಲ್ಲಿ ಪ್ರತಿ ತಿಂಗಳು ಅಂದಾಜು 600ರಷ್ಟು ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ಕೇಸಗಳು ದಾಖಲಾಗುತ್ತವೆ. ಒಂದು ದೂರನ್ನು ವಿಲೇ ಮಾಡಲು ಕನಿಷ್ಟ ಐದಾರು ತಿಂಗಳು ಸಮಯ ಹಿಡಿಯುತ್ತದೆ. ಆದಾಗ್ಯೂ ದೂರುಗಳ ವಿಲೇ ಪ್ರಕ್ರಿಯೆಯನ್ನು ಚುರುಕುಗೊಳಿಸಿದ್ದೇವೆ ಎಂದು ಅವರು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಆಯೋಗದ ನ್ಯಾಯಿಕ ಸದಸ್ಯರಾದ ಎಸ್.ಕೆ ವಂಟಿಗೋಡಿ ಉಪಸ್ಥಿತರಿದ್ದರು.

# ಪತ್ರಿಕೆಗಳಲ್ಲಿ ದಾಖಲಾದ ಕುಂದುಕೊರತೆಗಳ ಉಲ್ಲೇಖಿಸಿ ಅಧಿಕಾರಿಗಳಿಂದ ವರದಿ ಕೇಳಿದ ಆಯೋಗ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: "ಚಿಕಿತ್ಸೆ ಫಲಿಸದೇ ಬಾಣಂತಿ, ಮಗು ಸಾವು..", "ಕಲುಷಿತ ಆಹಾರ ಸೇವಿಸಿ ವಸತಿ ನಿಲಯದ ಮಕ್ಕಳು ಅಸ್ವಸ್ಥ".., "ಅಮಾಯಕರ ಬಲಿ ಪಡೆದ ರಸ್ತೆ ಗುಂಡಿ".. ಸೇರಿದಂತೆ ನಾನಾ ಕುಂದುಕೊರತೆಗಳ ಪತ್ರಿಕಾ ವರದಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಡಾ.ಟಿ.ಶ್ಯಾಮ್ ಭಟ್ ಹಾಗೂ ಆಯೋಗದ ನ್ಯಾಯಿಕ ಸದಸ್ಯರಾದ ಎಸ್.ಕೆ ವಂಟಿಗೋಡಿ ಅವರು ವರದಿ ಕೇಳಿದರು.**

ಮಾರ್ಚ 26ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಕರಣಗಳ ವಿಲೇವಾರಿ ಹಾಗೂ ಸಾರ್ವಜನಿಕ ಅಹವಾಲು ಸ್ವೀಕಾರ ಮತ್ತು ದೂರುಗಳ ವಿಚಾರಣೆ ಸಭೆ ನಡೆಸಿದ ಅಧ್ಯಕ್ಷರು ಹಾಗು ಸದಸ್ಯರು, ಹಲವಾರು ದಿನಪತ್ರಿಕೆಗಳಲ್ಲಿ 2022ರಿಂದ ಇದುವರೆಗೆ ವಿವಿಧ ದಿನಪತ್ರಿಕೆಗಳಲ್ಲಿ ವರದಿಯಾದ ಕುಂದುಕೊರತೆಗಳನ್ನು ಉಲ್ಲೇಖಿಸಿ ಅಧಿಕಾರಿಗಳಿಂದ ವರದಿ ಕೇಳಿದರು. ಅರಕೇರಾ ವಸತಿ ನಿಲಯದ ಅವ್ಯವಸ್ಥೆಗೆ ಸಂಬಂಧಿಸಿದಂತೆ ಕರ್ತವ್ಯ ಲೋಪ ಎಸಗಿದ ಸಂಬಂಧಪಟ್ಟ ಅಧಿಕಾರಿ ಮತ್ತು ವಾರ್ಡನಗೆ ನೋಟೀಸ್ ಕೊಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ದೇವದುರ್ಗ ತಾಲೂಕಿನ ಮನೆಯೊಂದರಲ್ಲಿ



80ಕ್ಕೂ ಹೆಚ್ಚು ನ್ಯಾಯಬೆಲೆ ಅಂಗಡಿಯ ಅಕ್ಕಿ ಚೀಲಗಳು ಪತ್ರಿಕಾ ವರದಿಯ ಬಗ್ಗೆ ಕೇಳಿದರು. ಇಲಾಖೆಯಿಂದ ಎಚ್ಚರಿಕೆಯ ನೋಟಿಸ್ ನೀಡಿದ್ದೇವೆ ಎಂದು ಆಹಾರ ಇಲಾಖೆಯ ಅಧಿಕಾರಿಗಳು ತಿಳಿಸಿದರು. ಲಿಂಗಸೂರ ಪುರಸಭೆ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಹಾವಳಿ ವರದಿಯ ಬಗ್ಗೆ ಕೇಳಿದರು. ಘಟನೆಗೆ ಸಂಬಂಧಿಸಿದಂತೆ ಸಂತ್ರಸ್ಥರಿಗೆ 5 ಲಕ್ಷ ಪರಿಹಾರ ನೀಡಿದ್ದೇವೆ ಎಂದು ಪುರಸಭೆ ಅಧಿಕಾರಿಗಳು ಪ್ರತಿಕ್ರಿಯಿಸಿದರು. ಆರ್‌ಟಿಪಿಎಸ್‌ನಲ್ಲಿ ಕರೆಂಟ್ ಶಾಖ್ ಕಾರ್ಮಿಕ ಸಾವು ಪ್ರಕರಣದಲ್ಲಿ ಪರಿಹಾರ ನೀಡಿದ್ದೇವೆ ಎಂದು ಆಯೋಗಕ್ಕೆ ಅಧಿಕಾರಿಗಳು ಮಾಹಿತಿ ನೀಡಿದರು. ಕಲುಷಿತ ನೀರು ಸೇವಿಸಿ ಸಿಂದನೂರ ತಾಲೂಕಿನ ಗ್ರಾಮವೊಂದರಲ್ಲಿ 40 ಜನ ಅಸ್ವಸ್ಥ ಘಟನೆಯ ಬಗ್ಗೆ ಸದಸ್ಯರು ಕೇಳಿದರು. ಗ್ರಾಮದಲ್ಲಿ ಶುಚಿತ್ವ ಕಾರ್ಯ ನಡೆಸಿದ್ದೇವೆ ಎಂದು ಅಧಿಕಾರಿಗಳು ಪ್ರತಿಕ್ರಿಯಿಸಿದರು. "ರಾಯಚೂರು ಜಿಲ್ಲೆಯಲ್ಲಿ ಬಾಲ ಗರ್ಭಿಣಿಯರು" ಎಂಬ ಪತ್ರಿಕಾ ವರದಿಯನ್ನು ಗಂಭೀರವಾಗಿ ಪರಿಗಣಿಸಿದ್ದು, ಎಲ್ಲ ತಾಲೂಕುಗಳಲ್ಲಿ ಕಿಶೋರಿ ತರಬೇತಿ ಕೇಂದ್ರ ತೆರೆದು ಅಲ್ಲಿ ಜಾಗೃತಿ ಕಾರ್ಯಕ್ರಮ, ಚೈಲ್ಡ್ ಮ್ಯಾರೇಜ್ ತಡೆಗೆ ಜಾಗೃತಿ ಕಾರ್ಯಕ್ರಮ ರೂಪಿಸಿದ್ದೇವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಪ್ರತಿಕ್ರಿಯಿಸಿದರು.

ಸ್ಮಶಾನಕ್ಕೆ ಸ್ಥಳ ಗುರುತಿಸಲು ಸೂಚನೆ: ಸಿಂಧನೂರ ತಾಲೂಕಿನ ಗ್ರಾಮವೊಂದರಲ್ಲಿ ಸ್ಮಶಾನ ಇಲ್ಲ ಎಂಬ ಪತ್ರಿಕಾ ವರದಿ ಉಲ್ಲೇಖಿಸಿದ ಆಯೋಗದ ಸದಸ್ಯರು, ಪ್ರತಿ ಗ್ರಾಮದಲ್ಲಿ ಸ್ಮಶಾನಕ್ಕೆ ಸ್ಥಳ ಗುರುತಿಸಿ ಕ್ರಮವಹಿಸಬೇಕು ಎಂದು



ಸಹಾಯಕ ಆಯುಕ್ತರಿಗೆ ನಿರ್ದೇಶನ ನೀಡಿದರು. ಸುಮೊಟೊ ಕೇಸ್ ದಾಖಲು: ಜಿಲ್ಲೆಯಲ್ಲಿ ನಾಲ್ವರು ಬಾಣಂತಿಯರ ಸಾವಿಗೀಡಾದ ಬಗೆಗಿನ ಪತ್ರಿಕಾ ವರದಿ ಆಧರಿಸಿ ಸುಮೊಟೊ ಕೇಸ್ ದಾಖಲಿಸಿದ ಬಗ್ಗೆ ತಿಳಿಸಿದ ಅಧ್ಯಕ್ಷರು, ಆರೋಗ್ಯ ಇಲಾಖೆಯಿಂದ ವಿವರಣೆ ಕೇಳಿದರು. ದೇವದುರ್ಗ ತಾಲೂಕಿನಿಂದ ವರದಿಯಾದ ಬಾಣಂತಿ ಮತ್ತು ಶಿಶು ಸಾವಿನ ಬಗ್ಗೆ ಕೇಳಿದರು. ಈ ಬಗ್ಗೆ ನಿರ್ಲಕ್ಷ್ಯ ಆಗಿಲ್ಲ ಎಂದು ಆರೋಗ್ಯ ಅಧಿಕಾರಿಗಳು ಪ್ರತಿಕ್ರಿಯಿಸಿದರು.

ಶಾಲಾ ಮುಖ್ಯ ಶಿಕ್ಷಕ ಅಮಾನತು: ಸಿಂಧನೂರು ತಾಲೂಕಿನ ಕುರಕುಂದ ಶಾಲೆಯಲ್ಲಿ ವಿದ್ಯುತ್ ಹರಿದು ಬಾಲಕಿ ಸಾವು ದುರ್ಘಟನೆ ಸಭೆಯಲ್ಲಿ ಚರ್ಚೆಗೆ ಬಂದಿತು. ಈ ಸಂಬಂಧ ಶಾಲಾ ಮುಖ್ಯ ಶಿಕ್ಷಕರ ಮೇಲೆ ಎಫ್ ಐಆರ್ ದಾಖಲಾಗಿ, ಅಮಾನತು ಮಾಡಲಾಗಿದೆ. ಜೆಸ್ಕಾಂ ಲೋಪವಿಲ್ಲ ಎಂದು ಅಧಿಕಾರಿಗಳು ತಿಳಿಸಿದರು. ಗ್ರಾಮ ಸೇವಕ ಅಮಾನತು: ಸುಳ್ಳು ದಾಖಲೆ ಸೃಷ್ಟಿಸಿ ಲೋಪ ಎಸಗಿದ ಸಿರವಾರ ಹೋಬಳಿಯ ಗ್ರಾಮ ಸೇವಕ ಸಿದ್ದಪ್ಪ ಎಂಬುವರನ್ನು ಅಮಾನತು ಮಾಡಲಾಗಿದೆ ಎಂದು ಆಯೋಗಕ್ಕೆ ಅಧಿಕಾರಿಗಳು ತಿಳಿಸಿದರು.

ವೈದ್ಯರ ಮೇಲೆ ಕ್ರಮಕ್ಕೆ ಸೂಚನೆ: ದೇವದುರ್ಗ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಸಕಾಲಕ್ಕೆ ಚಿಕಿತ್ಸೆ ಸಿಗದೇ ಬಾಣಂತಿ ಮತ್ತು ಮಗು ಸಾವಿನ ಬಗ್ಗೆ ವರದಿ ಕೇಳಿದ ಅಧ್ಯಕ್ಷರು, ವೈದ್ಯರ ಲೋಪದ ಬಗ್ಗೆಯೂ ಪರಿಶೀಲಿಸಬೇಕು ಎಂದರು.

ಇಬ್ಬರು ನರ್ಸಗಳಿಗೆ ನೋಟೀಸ್ ನೀಡಿದ್ದೇವೆ ಎಂದು ಡಿಎಚ್‌ಓ ತಿಳಿಸಿದರು. ಎಕರೆ ಜಮೀನು ಖರೀದಿ: ಮಸ್ಕಿ ನಗರದ ಮನೆ ಅಂಗಳದಲ್ಲಿ ಶವಸಂಸ್ಕಾರ ಸುದ್ದಿಗೆ ಸದಸ್ಯರು ವರದಿ ಕೇಳಿದರು. ಸ್ಥಳಕ್ಕೆ ಭೇಟಿ ಮಾಡಿದ್ದೇವೆ. ಎಕರೆ ಜಾಗ ಖರೀದಿಸಿ ಪರಿಹಾರ ಕಲ್ಪಿಸಿದ್ದೇವೆ ಎಂದು ಮಸ್ಕಿ ತಹಸೀಲ್ದಾರ ತಿಳಿಸಿದರು. ಹಟ್ಟಿಗೋಲ್ಡ್ ಮೈನ್ ಆಸ್ಪತ್ರೆ ದುಸ್ಥಿತಿ: ವಿದ್ಯುತ್ ವ್ಯತ್ಯಯ ವೇಳೆಯಲ್ಲಿ ಮೊಬೈಲ್ ಟಾರ್ಚ ಬೆಳಕಿನಲ್ಲಿ ಹಟ್ಟಿಗೋಲ್ಡ್ ಮೈನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೆರಿಗೆ ಮಾಡಲಾಗಿದೆ ಎನ್ನುವ ಪತ್ರಿಕಾ ವರದಿಗೆ ಅಧ್ಯಕ್ಷರು ವಿವರಣೆ ಕೇಳಿದರು.

ಘಟನೆಯ ಬಳಿಕ ಸಮರ್ಪಕ ವಿದ್ಯುತ್ ಪೂರೈಕೆಗೆ ಆಸ್ಪತ್ರೆಯಲ್ಲಿ ಏರ್ಪಾಡು ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ಸಕಾಲಕ್ಕೆ ವರದಿ ಸಲ್ಲಿಸಲು ನಿರ್ದೇಶನ: ರಾಯಚೂರ ಜಿಲ್ಲೆಯಲ್ಲಿ 59 ಪ್ರಕರಣಗಳ ವಿಚಾರಣೆ ಮಾಡಲಾಗಿದೆ ಎಂದು ತಿಳಿಸಿದ ಅಧ್ಯಕ್ಷರು, ಸಂಬಂಧಿಸಿದ ಇಲಾಖೆಗಳು ಸಕಾಲಕ್ಕೆ ಆಯೋಗಕ್ಕೆ ವರದಿ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.